HANUMANTHARAYAPPA B R
Digitally signed by HANUMANTHARAYAPPA B R
Date: 2026.08.10 11:05:10 +0530

KACD420015602020

Presented on : 15-10-2020
Registered on : 15-10-2020
Decided on : 07-08-2026
Duration : 5 years, 9 months, 23 days

ಅಪರ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ. ನ್ಯಾಯಾಲಯ, ಹೊಳಲ್ಕೆರೆ.

ಉಪಸ್ಥಿತರು: ಹನುಮಂತರಾಯಪ್ಪ.ಬಿ.ಆರ್.
ಬಿ.ಎ. ಎಲ್.ಎಲ್.ಬಿ.,
ಅಪರ ಸಿವಿಲ್ ಮತ್ತು ನ್ಯಾಯಿಕ ದಂಡಾಧಿಕಾರಿಗಳು,
ಹೊಳಲ್ಕೆರೆ.

**ಅಪರಾಧ ಪ್ರಕರಣ ಸಂಖ್ಯೆ : 1071/2020**

ದಿನಾಂಕ : 07 ನೇ ಆಗಸ್ಟ್ 2026

ಪಿರ್ಯಾದುದಾರರು :

ಕರ್ನಾಟಕ ಸರ್ಕಾರದ ಪರವಾಗಿ ಹೊಳಲ್ಕೆರೆ ಪೋಲಿಸ್ ಠಾಣೆ.

(ಸಹಾಯಕ ಸರ್ಕಾರಿ ಅಭಿಯೋಜಕರು)

ವಿರುದ್ಧ

ಆರೋಪಿತರು 1. ನವೀನ ಯಾನೆ ಸ್ವಾಮಿ ತಂದೆ ಗಾಗಣ್ಣ

(**1** ನೇ ಆರೋಪಿ ಮೃತಪಟ್ಟಿರುತ್ತಾರೆ )

2. ಪರಮೇಶ ತಂದೆ ಸೋಮಣ್ಣ
20 ವರ್ಷ

3. ಹನುಮಂತ ತಂದೆ ಜಾವೂರಪ್ಪ
20 ವರ್ಷ

1 ರಿಂದ 3 ನೇ ಆರೋಪಿತರ ವಾಸ ಶಿವನಿ ಗ್ರಾಮ
ತರೀಕೆರೆ ತಾಲ್ಲೂಕು, ಚಿಕ್ಕಮಂಗಳೂರು ಜಿಲ್ಲೆ

4. ಪಾಪಣ್ಣ ಯಾನೆ ನಾಗರಾಜ
ತಂದೆ ಸತ್ಯಪ್ಪ
19 ವರ್ಷ
ವಾಸಃ ಎ.ಕೆ. ಕಾಲೋನಿ ಚನ್ನಗಿರಿ ನಗರ
ಚನ್ನಗಿರಿ ತಾಲ್ಲೂಕು.
(2 ಮತ್ತು 3 ನೇ ಆರೋಪಿ ಪರ ಶ್ರೀ ಎಸ್.ವಿ.ಕೆ., ವಕೀಲರು)
(4 ನೇ ಆರೋಪಿ ಪರ ಶ್ರೀ ಬಿ.ಹೆಚ್.ಬಿ., ವಕೀಲರು)

| | | | |
|---|---|---|---|
| ಅಪರಾಧ ಸಂಭವಿಸಿದ ದಿನಾಂಕ | 17/06/2013 | | |
| ಅಪರಾಧ ವರದಿಯಾದ ದಿನಾಂಕ | 18/06/2013 | | |
| ಪಿರ್ಯಾದುದಾರರ ಹೆಸರು | ಹೊಳಲ್ಕೆರೆ ಪೋಲಿಸರು | | |
| ಸಾಕ್ಷಿ ವಿಚಾರಣೆ ಪ್ರಾರಂಭಿಸಿದ ದಿನಾಂಕ | 30/11/2021 | | |
| ಸಾಕ್ಷಿ ವಿಚಾರಣೆ ಮುಗಿಸಿದ ದಿನಾಂಕ | 16/07/2026 | | |
| ಆರೋಪಗಳು | ಕಲಂ 454, 380 ಐಪಿಸಿ | | |
| ನ್ಯಾಯಾಧೀಶರ ತೀರ್ಮಾನ | ನಿರ್ದೋಷಿಗಳು ಎಂದು ಪರಿಗಣಿಸಿದೆ | | |
| ತೀರ್ಮಾನವಾದ ದಿನಾಂಕ | 07/08/2026 | | |
| ಒಟ್ಟು ಸಮಯ | ವರ್ಷ | ತಿಂಗಳುಗಳು | ದಿನಗಳು |

(ಹನುಮಂತರಾಯಪ್ಪ )
ಅಪರ ಸಿವಿಲ್ ನ್ಯಾಯಾಧೀಶರು ಮತ್ತು
ಜೆ.ಎಂ.ಎಫ್.ಸಿ. ಹೊಳಲ್ಕೆರೆ.

## ::ತೀರ್ಪು::

ಹೊಳಲ್ಕೆರೆ ವೃತ್ತ ನಿರೀಕ್ಷಕರು ಆರೋಪಿತರ ವಿರುದ್ಧ ಕಲಂ.454 ಮತ್ತು 380 ಐಪಿಸಿ ರಡಿಯಲ್ಲಿನ ಅಪರಾಧಗಳಿಗೆ ದೋಷಾರೋಪಣ ಪತ್ರವನ್ನುಸಲ್ಲಿಸಿರುತ್ತಾರೆ. 1 ನೇ ಆರೋಪಿಯು ಮರಣ ಹೊಂದಿದ್ದು ದಿನಾಂಕ 10/07/2023 ರ ಆದೇಶದಂತೆ 1 ನೇ ಆರೋಪಿಯನ್ನು ಈ ಪ್ರಕರಣದಿಂದ ಕೈಬಿಡಲಾಗಿರುತ್ತದೆ.

**2.** ಅಭಿಯೋಜನೆ ಪ್ರಕರಣದ ಸಂಕ್ಷಿಪ್ತ ಸಾರಾಂಶ ಈ ಕೆಳಗಿನಂತೆ ಇರುತ್ತದೆ:-

ದಿನಾಂಕಃ 17/06/2013 ರಂದು ಮಧ್ಯಾಹ್ನ 1-00 ಗಂಟೆ ಸಮಯದಲ್ಲಿ ದೂಷ ಸಾಕ್ಷಿ-1 ರವರು ಹೊಳಲ್ಕೆರೆ ಪೋಲಿಸ್ ಠಾಣಾ ವ್ಯಾಪ್ತಿಯ ಮಲ್ಲಾಡಿಹಳ್ಳಿ ಗ್ರಾಮದಲ್ಲಿರುವ ತನ್ನ ಮನೆಗೆ ಬೀಗ ಹಾಕಿಕೊಂಡು ತನ್ನ ಹೆಂಡತಿಯನ್ನು ರೈಲ್ವೆ ಸ್ಟೇಷನ್ ನಲ್ಲಿರುವ ಶಾಲೆಗೆ ಬಿಟ್ಟು ಬರಲು ಹೋಗಿದ್ದ ಸಮಯದಲ್ಲಿ ಆರೋಪಿತರು ಮಧ್ಯಾಹ್ನದ ವೇಳೆಯಲ್ಲಿ ಮನೆಯ ಬಾಗಿಲ ಬೀಗ ಮುರಿದು ಮನೆಯ ಒಳಗೆ ಅತಿಕ್ರಮ ಪ್ರವೇಶ ಮಾಡಿ ಗ್ರಾಡ್ರೇಜ್ ಬೀರುವಿನಲ್ಲಿದ್ದ ಒಂದು ಬಂಗಾರದ ಕೊರಳಚೈನ್, ಒಂದು ಜೊತೆ ಬಂಗಾರದ ಓಲೆ ಜುಮಕಿ, ಎರಡು ಬಂಗಾರದ ಉಂಗುರಗಳು ಹಾಗೂ ರೂ.1,05,000/- ನಗದನ್ನು ಕಳ್ಳತನ ಮಾಡಿಕೊಂಡು ಹೋಗಿರುತ್ತಾರೆಂದು ತನಿಖೆಯಿಂದ ಧೃಡಪಟ್ಟಿರುತ್ತದೆ ಎಂದು ಆರೋಪಿತರ ವಿರುದ್ಧ ಭಾರತೀಯ ದಂಡ ಸಂಹಿತೆ ಕಲಂ.454, 380 ಐಪಿಸಿ ರಡಿಯಲ್ಲಿ ದೋಷಾರೋಪಣಾ ಪಟ್ಟಿಯನ್ನು ನ್ಯಾಯಾಲಯಕ್ಕೆ ಸಲ್ಲಿಸಿರುತ್ತಾರೆ.

3. ಈ ನ್ಯಾಯಾಲಯವು ಆರೋಪ ಪಟ್ಟಿಯಲ್ಲಿನ ಆರೋಪವನ್ನು ಆಧರಿಸಿ ಸಂಜ್ಞೆಯನ್ನು ತೆಗೆದುಕೊಂಡು ಆರೋಪಿತರಿಗೆ ಈ ನ್ಯಾಯಾಲಯದಿಂದ ಸಮನ್ಸ್ ಜಾರಿ ಮಾಡಿದ್ದು, ಆರೋಪಿತರು ವಕೀಲರ ಮೂಲಕ ಹಾಜರಾಗಿ ಜಾಮೀನು ಅರ್ಜಿಯನ್ನು ಸಲ್ಲಿಸಿ ಜಾಮೀನಿನ ಮೇಲೆ ಬಿಡುಗಡೆ ಹೊಂದಿರುತ್ತಾರೆ. ಆರೋಪಿತರಿಗೆ ದೋಷಾರೋಪಣೆ ಪಟ್ಟಿಯ ದಾಖಲೆಗಳನ್ನು ಸಿ.ಆರ್.ಪಿ.ಸಿ ಕಲಂ.207 ರ ಅಡಿಯಲ್ಲಿ ಒದಗಿಸಲಾಯಿತು. ಆರೋಪಿತರಿಗೆ ಕಲಂ.454 ಮತ್ತು 380 ರ ಅಡಿಯಲ್ಲಿನ ಅಪರಾಧಗಳ ಬಗ್ಗೆ ಆಪಾದನೆಯ ಸಾರಾಂಶಗಳನ್ನು ಆರೋಪಿತರಿಗೆ ತಿಳಿದ ಭಾಷೆಯಲ್ಲಿ ಓದಿ ಹೇಳಿದ್ದು ಆರೋಪಿತರು ಆರೋಪದ ಎಲ್ಲಾ ಅಂಶಗಳನ್ನು ನಿರಾಕರಿಸಿ ವಿಚಾರಣೆಯನ್ನು ಬಯಸಿರುತ್ತಾರೆ. ಪ್ರಕರಣದ ವಿಚಾರಣಾ ಹಂತದಲ್ಲಿ 1 ನೇ ಆರೋಪಿಯು ಮರಣ ಹೊಂದಿದ್ದು ದಿನಾಂಕ 10/07/2023 ರಂದು ನ್ಯಾಯಾಲಯದ ಆದೇಶದಂತೆ ಸದರಿ 1 ನೇ ಆರೋಪಿಯ ವಿರುದ್ದ ಪ್ರಕರಣದಿಂದ ಕೈ ಬಿಡಲಾಗಿರುತ್ತದೆ.

4. ಅಭಿಯೋಜನೆಯು 2 ರಿಂದ 4 ನೇ ಆರೋಪಿತರ ಮೇಲೆ ಆರೋಪಿಸಿರುವ ಆರೋಪವನ್ನು ಸಾಭೀತುಪಡಿಸುವ ಸಲುವಾಗಿ ಅಭಿಯೋಜನೆಯವರು ಸಾಕ್ಷ್ಯವಿಚಾರಣೆಯನ್ನು ಆರಂಭಿಸಿದ್ದು ಆರೋಪ ಪಟ್ಟಿಯಲ್ಲಿನ 16 ಸಾಕ್ಷಿಗಳ ಪೈಕಿ ಚಾಸಾ-3, 1, 5, 4, 6, 8, 11, 13, 15, 16, 7 ರವರನ್ನು ಪ್ರಾಸಾ.1 ರಿಂದ ಪ್ರಾಸಾ.11 ರಂತೆ ಸಾಕ್ಷಿದಾರರ ಹೇಳಿಕೆಗಳನ್ನು ಪಡೆದಿದ್ದು, ನಿಪಿ.1 ರಿಂದ ನಿಪಿ.9 ರಂತೆ ಅಭಿಯೋಜನೆಯ ದಾಖಲೆಗಳನ್ನು ಗುರುತಿಸಿಕೊಂಡಿರುತ್ತಾರೆ. ಅಭಿಯೋಜನೆಯ ಸಾಕ್ಷ್ಯ ವಿಚಾರಣೆಯನ್ನು ಮುಕ್ತಾಯಗೊಳಿಸಿದ ನಂತರ ಆರೋಪಿತರಿಗೆ ಸಿ.ಆರ್.ಪಿ.ಸಿ ಕಲಂ.313 ರಡಿಯಲ್ಲಿ ಆರೋಪಿತರ ಹೇಳಿಕೆಯನ್ನು ದಾಖಲಿಸಿಕೊಂಡಿದ್ದು, ಆರೋಪಿತರು ಅಭಿಯೋಜನೆಯ ಎಲ್ಲಾ ಸಾಕ್ಷಿದಾರರು ಆಪಾದಿಸುವ ಎಲ್ಲಾ ಹೇಳಿಕೆಗಳನ್ನು ಹಾಗೂ ಸಾಕ್ಷ್ಯಗಳನ್ನು ಅಲ್ಲಗಳೆದಿರುತ್ತಾರೆ. ತಮ್ಮ ಪರ ಯಾವುದೇ ಸಾಕ್ಷ್ಯ ಇಲ್ಲ ಎಂದು ನುಡಿದಿರುತ್ತಾರೆ.

5. ಅಭಿಯೋಜನೆಯ ಪರ ಸರ್ಕಾರಿ ವಕೀಲರ ಮತ್ತು 2 ರಿಂದ 4 ನೇ ಆರೋಪಿತರು ಪರ ವಕೀಲರ ವಾದ ವಿವಾದವನ್ನು ಕೇಳಲಾಯಿತು ಹಾಗೂ ಕಡತದಲ್ಲಿರುವ ಎಲ್ಲಾ ಸಾಕ್ಷ್ಯದಾರರನ್ನು ಕೂಲಂಕುಷವಾಗಿ ಪರಿಶೀಲಿಸಿದ ನಂತರ ಈ ಕೆಳಕಂಡ ಅಂಶಗಳು ನ್ಯಾಯಾಲಯದ ಪರಿಗಣನೆಗೆ ಉದ್ಭವಿಸುತ್ತದೆ.

## ಅಂಶಗಳು

1) ದಿನಾಂಕ 17/06/2013 ರಂದು ಮಧ್ಯಾಹ್ನ 1-00 ಗಂಟೆ ಸಮಯದಲ್ಲಿ ದೋ.ಸಾಕ್ಷಿ-1 ರವರು ಪೋಲಿಸ್ ಠಾಣಾ ವ್ಯಾಪ್ತಿಯ ಮಲ್ಲಾಡಿಹಳ್ಳಿ ಗ್ರಾಮದಲ್ಲಿರುವ ತನ್ನ ಮನೆಗೆ ಬೀಗ ಹಾಕಿಕೊಂಡು ತನ್ನ ಹೆಂಡತಿಯನ್ನು ರೈಲ್ವೆ ಸ್ಟೇಷನ್ ನಲ್ಲಿರುವ ಶಾಲೆಗೆ ಬಿಟ್ಟು ಬರಲು ಹೋಗಿದ್ದ ಸಮಯದಲ್ಲಿ 1 ರಿಂದ 4 ನೇ ಆರೋಪಿತರು ಮಧ್ಯಾಹ್ನ ವೇಳೆಯಲ್ಲಿ ಮನೆಯ ಬಾಗಿಲ ಬೀಗ ಮುರಿದು ಮನೆಯ ಒಳಗೆ ಅತಿಕ್ರಮ ಪ್ರವೇಶ ಮಾಡಿರುತ್ತಾರೆ, ಆ ಪ್ರಕಾರ ಆರೋಪಿತರು ಭಾರತ ದಂಡ ಸಂಹಿತೆ ಕಲಂ.454 ರ ಅಡಿಯಲ್ಲಿ ಶಿಕ್ಷಾರ್ಹವಾದ ಅಪರಾಧವನ್ನು ಎಸಗಿರುತ್ತಾರೆಂದು ಅಭಿಯೋಜನೆಯವರು ಸಂಶಯಾತೀತವಾಗಿ ರುಜುವಾತುಪಡಿಸುವರೇ **?**

2) ಮೇಲೆ ಹೇಳಲಾದ ದಿನಾಂಕ ಸಮಯ ಮತ್ತು ಸ್ಥಳದಲ್ಲಿ 1 ರಿಂದ 4ನೇ ಆರೋಪಿತರು ದೋ.ಸಾಕ್ಷಿ-1 ರವರ ಮನೆಯ ಒಳಗಡೆ ಅತಿಕ್ರಮ ಪ್ರವೇಶ ಮಾಡಿ ಗಾಡ್ರೇಜ್ ಬೀರುವಿನಲ್ಲಿದ್ದ ಒಂದು ಬಂಗಾರದ ಕೊರಳಚೈನ್, ಒಂದು ಜೊತೆ ಬಂಗಾರದ ಓಲೆ ಜುಮುಕಿ, ಎರಡು ಬಂಗಾರದ ಉಂಗುರುಗಳು ಹಾಗೂ ರೂ 1,05,000/- ನಗದನ್ನು ಕಳ್ಳತನ ಮಾಡಿಕೊಂಡು ಹೋಗಿರುತ್ತಾರೆಂದು ಆ ಪ್ರಕಾರ ಆರೋಪಿತರು ಭಾರತ ದಂಡ ಸಂಹಿತೆ ಕಲಂ.380 ಅಡಿಯಲ್ಲಿ ಶಿಕ್ಷಾರ್ಹವಾದ ಅಪರಾಧವನ್ನು ಎಸಗಿರುತ್ತಾರೆಂದು ಅಭಿಯೋಜನೆಯವರು ಸಂಶಯಾತೀತವಾಗಿ ರುಜುವಾತುಪಡಿಸುವರೇ?

3) ಯಾವ ಆದೇಶ ?

6. ಮೇಲ್ಕಂಡ ವಿವಾದಾಂಶಕ್ಕೆ ಈ ಕೆಳಕಂಡ ಕಾರಣಗಳಿಗಾಗಿ ಉತ್ತರಿಸುತ್ತೇನೆ.

ಅಂಶ 1 ಃ ನಕರಾತ್ಮವಾಗಿ
ಅಂಶ 2 ಃ ನಕರಾತ್ಮವಾಗಿ
ಅಂಶ 3 ಅಂತಿಮ ಆದೇಶದಂತೆ ಈ ಕೆಳಕಂಡ ಕಾರಣಗಳಿಗಾಗಿಃ-

ಃಃ ಕಾರಣಗಳು ಃಃ

7. **ಅಂಶ 1 ಮತ್ತು 2-** ಈ ಮೇಲ್ಕಂಡ ಅಂಶಗಳು ಒಂದಕ್ಕೊಂದು ಪೂರಕ ಸಂಗತಿಗಳನ್ನು ಒಳಗೊಂಡಿರುವುದರಿಂದ ಪುನರಾವರ್ತನೆಯನ್ನು ತಪ್ಪಿಸಲು ಒಟ್ಟಿಗೆ ಚರ್ಚೆಗೆ ತೆಗೆದುಕೊಳ್ಳಲಾಗಿದೆ.

8. ಅಭಿಯೋಜನೆ ಪ್ರಕಾರ ದಿನಾಂಕಃ 17/06/2013 ರಂದು ಮಧ್ಯಾಹ್ನ 1-00 ಗಂಟೆ ಸಮಯದಲ್ಲಿ ದೋ.ಸಾಕ್ಷಿ-1 ರವರು ಹೊಳಲ್ಕೆರೆ ಪೋಲಿಸ್ ಠಾಣಾ ವ್ಯಾಪ್ತಿಯ ಮಲ್ಲಾಡಿಹಳ್ಳಿ ಗ್ರಾಮದಲ್ಲಿರುವ ತನ್ನ ಮನೆಗೆ ಬೀಗ ಹಾಕಿಕೊಂಡು ತನ್ನ ಹೆಂಡತಿಯನ್ನು ರೈಲ್ವೆ ಸ್ಟೇಷನ್ ನಲ್ಲಿರುವ ಶಾಲೆಗೆ ಬಿಟ್ಟು ಬರಲು ಹೋಗಿದ್ದ ಸಮಯದಲ್ಲಿ ಆರೋಪಿತರು ಮಧ್ಯಾಹ್ನದ ವೇಳೆಯಲ್ಲಿ ಮನೆಯ ಬಾಗಿಲ ಬೀಗ ಮುರಿದು ಮನೆಯ ಒಳಗಡೆ ಅತಿಕ್ರಮ ಪ್ರವೇಶ ಮಾಡಿ ಗ್ರಾಡ್ರೇಜ್ ಬೀರುವಿನಲ್ಲಿದ್ದ ಒಂದು ಬಂಗಾರದ ಕೊರಳಚೈನ್, ಒಂದು ಜೊತೆ ಬಂಗಾರದ ಓಲೆ ಜುಮಕಿ, ಎರಡು ಬಂಗಾರದ ಉಂಗುರಗಳು ಹಾಗೂ ರೂ.1,05,000/-

ನಗದನ್ನು ಕಳ್ಳತನ ಮಾಡಿಕೊಂಡು ಹೋಗಿರುತ್ತಾರೆಂದು ತನಿಖೆಯಿಂದ ಧೃಡಪಟ್ಟಿರುತ್ತದೆ ಎಂದು 1 ರಿಂದ 4 ನೇ ಆರೋಪಿತರ ವಿರುದ್ಧ ಭಾರತೀಯ ದಂಡ ಸಂಹಿತೆ ಕಲಂ.454, 380 ಐಪಿಸಿ ರಡಿಯಲ್ಲಿ ದೋಷಾರೋಪಣಾ ಪಟ್ಟಿಯನ್ನು ನ್ಯಾಯಾಲಯಕ್ಕೆ ಸಲ್ಲಿಸಿರುತ್ತಾರೆ.

9. ಅಭಿಯೋಜನೆಯವರು 2 ರಿಂದ 4 ನೇ ಆರೋಪಿತರ ವಿರುದ್ಧ ಹೊರಿಸಿರುವ ಆರೋಪಗಳನ್ನು ರುಜುವಾತುಪಡಿಸುವ ಸಲುವಾಗಿ ಪ್ರಾಸಾ.1 ರಿಂದ ಪ್ರಾಸಾ.11 ಎಂಬುದಾಗಿ ಸಾಕ್ಷ್ಯ ನೀಡಿದ್ದು, ನಿಪಿ.1 ರಿಂದ ನಿಪಿ.9 ರಂತೆ ದಾಖಲೆಗಳನ್ನು ಗುರುತಿಸಿಕೊಂಡಿರುತ್ತಾರೆ.

10. ಪ್ರಾಸಾ.1/ ಚಾಸಾ.3 ಎಂ.ಆರ್.ಮಂಜುನಾಥ್ ರವರು ಈ ಪ್ರಕರಣದಲ್ಲಿ ಕೃತ್ಯ ನಡೆದ ಸ್ಥಳ ಪಂಚನಾಮೆಯ ಸಾಕ್ಷಿದಾರರಾಗಿದ್ದು, ತಮ್ಮ ಮುಖ್ಯ ವಿಚಾರಣೆಯಲ್ಲಿ ದಿ:18.06.2013 ರ ಸ್ಥಳ ಪಂಚ ನಾಮೆ ಹಾಗೂ ಅದರಲ್ಲಿರುವ ಸಹಿಯನ್ನು ನಿಪಿ-1 (ಎ) ಎಂದು ಗುರುತಿಸಲಾಗಿರುತ್ತದೆ ಎಂದು ಸಾಕ್ಷ್ಯವನ್ನು ನುಡಿದಿದ್ದು, ನಿಪಿ-1 ಕ್ಕೆ ನಾನು ನಮ್ಮ ಊರಿನ ಬಸ್ ಸ್ಟಾಂಡ್ ಬಳಿ ಸಹಿ ಮಾಡಿರುತ್ತೇನೆ. ನಿಪಿ-1 ರಲ್ಲಿ ಏನು ಬರೆದಿದೆ ಎಂಬುದು ನನಗೆ ಗೊತ್ತಿಲ್ಲ ಅದರ ವಿಚಾರಗಳನ್ನು ನನಗೆ ಓದಿ ಹೇಳಿಲ್ಲ, ನಿಪಿ-1 ನ್ನು ಎಲ್ಲಿ ಯಾವಾಗ, ಬರೆಯಲಾಯಿತು ಎಂಬುದು ಸಹಾ ನನಗೆ ಗೊತ್ತಿಲ್ಲ, ನಿಪಿ-1 ಕ್ಕೆ ನನ್ನ ಜೊತೆ ಬೇರೆ ಯಾರು ಸಹಿ ಮಾಡಿರುತ್ತಾರೆ ಎಂಬುದು ಸಹಾ ನನಗೆ ಗೊತ್ತಿಲ್ಲ. ಕೆಲಸದ ನಿಮ್ಮಿತ್ತ ನಾನು ನಮ್ಮ ಬಸ್ ಸ್ಟಾಂಡ್ ಬಳಿ ನಿಂತಿದ್ದಾಗ ಪೊಲೀಸರು ಕೆಲವು ದಾಖಲೆಗಳಿಗೆ ನನ್ನ ಸಹಿ ಪಡೆದುಕೊಂಡಿರುತ್ತಾರೆ. ಪೊಲೀಸರಿಗೆ ಚಾಸಾ-1 ರವರು ಯಾವುದೇ ಸ್ಥಳವನ್ನು ತೋರಿಸಿಲ್ಲ. ಪೊಲೀಸರು ನನ್ನ ಸಮಕ್ಷಮ ಯಾವುದೇ ಪಂಚನಾಮೆ ಮಾಡಿಲ್ಲ ಮತ್ತು ನಮ್ಮ ಸಮಕ್ಷಮ ಯಾವುದೇ ಕಚ್ಚಾನಕ್ಷೆಯನ್ನು ಸಹಾ ತಯಾರು ಮಾಡಿಲ್ಲ ಎಂದು ಪ್ರತಿಕೂಲ ಸಾಕ್ಷ್ಯವನ್ನು ನುಡಿದಿರುತ್ತಾರೆ.

11. ಪ್ರಾಸಾ.2/ಚಾಸಾ.1 ಎಂ.ವಿ.ನಾಗರಾಜ್ ರವರು ಪಿರ್ಯಾದಿದಾರರಾಗಿದ್ದು, ನಾನು ಚಿಕ್ಕಜಾಜೂರು ಪೋಲೀಸ್ ಠಾಣೆಯಲ್ಲಿ

ಸುಮಾರು 5-6 ವರ್ಷಗಳ ಹಿಂದೆ ನೋಡಿರುತ್ತೇನೆ 2013 ರಲ್ಲಿ ನಾನು ನನ್ನ ಹೆಂಡತಿಯನ್ನು ಶಾಲೆಗೆ ಬಿಡಲು ಬೆಳಿಗ್ಗೆ 12.00 ಗಂಟೆಗೆ ನಮ್ಮ ಮನೆಗೆ ಬೀಗ ಹಾಕಿಕೊಂಡು ಹೋಗಿದ್ದು, ನಂತರ ಮಧ್ಯಾಹ್ನ 2.00 ಗಂಟೆಗೆ ಮನೆಗೆ ಊಟಕ್ಕೆ ಹೋದಾಗ ಮನೆಯ ಬೀಗವನ್ನು ಒಡೆದು ಮನೆಯ ಬೀರುವಿನ ಬೀಗವನ್ನು ಮುರಿದು ಅದರಲ್ಲಿದ್ದ 9 ಸಾವಿರ ರೂಪಾಯಿಗಳ ಹಣ, ಒಂದು ಜೊತೆ ಬಂಗಾರದ ಓಲೆ ಮತ್ತು ಝುಮುಕಿ, 2 ಬಂಗಾರದ ಉಂಗುರಗಳು ಕಳ್ಳತನವಾಗಿದ್ದು, ಸದರಿ ಒಡವೆಗಳ ಒಟ್ಟು ಬೆಲೆ ಆಗಿನ ಕಾಲಕ್ಕೆ 49 ಸಾವಿರಗಳಾಗಿದ್ದವು. ನಂತರ ಮರುದಿನ ನಾನು ಈ ಬಗ್ಗೆ ಪೋಲೀಸ್ ಠಾಣೆಯಲ್ಲಿ ದೂರನ್ನು ದಾಖಲಿಸಿದ್ದು, ಪೋಲೀಸರು ನಮ್ಮ ಮನೆಗೆ ಬಂದು ಪಂಚನಾಮೆ ತನಿಖೆ ನಡೆಸಿ ಪಂಚನಾಮೆ ಕ್ರಮ ಜರುಗಿಸಿರುತ್ತಾರೆ. ಸದರಿ ಪಂಚನಾಮೆ ಕಾಲಕ್ಕೆ ಚಾಸಾಃ 2 ಮತ್ತು 3 ರವರು ಹಾಜರಿದ್ದರು. ಪಂಚನಾಮೆ ಕ್ರಮ ಜರುಗಿಸಲು ಸ್ಥಳವನ್ನು ಪೋಲೀಸರಿಗೆ ನಾನೇ ತೋರಿಸಿರುತ್ತೇನೆ. ಪಂಚನಾಮೆ ಕಾಲಕ್ಕೆ 2 ಪೋಟೋಗಳನ್ನು ತೆಗೆದಿರುತ್ತಾರೆ. ತಾನು, ಚಾಸಾಃ 2 ಮತ್ತು 3 ರವರು ಇರುವುದನ್ನು ನೋಡಿ ಗುರುತಿಸಲಾಗಿರುತ್ತದೆ, ನಿಪಿ-2 ದೂರು ಅದರಲ್ಲಿರುವ ಸಹಿಯನ್ನು ನಿಪಿ-2(ಎ) ಹಾಗೂ ನಿಪಿ-1 ರ ಪಂಚನಾಮೆ ಹಾಗೂ ಅದರಲ್ಲಿರುವ ಸಹಿಯನ್ನು ನಿಪಿ-1(ಬಿ) ಎಂದು ಗುರುತಿಸಲಾಗಿರುತ್ತದೆ, ನಂತರ ದಿಃ 24.03.2017 ರಂದು ಆರೋಪಿತರು ಚಿಕ್ಕಜಾಜೂರು ಪೋಲೀಸರವರಿಗೆ ಪತ್ತೆಯಾಗಿರುತ್ತಾರೆ ಬನ್ನಿ ಎಂದು ತಿಳಿಸಿದ್ದರಿಂದ, ನಾನು ಚಿಕ್ಕಜಾಜೂರು ಪೋಲೀಸ್ ಠಾಣೆಗೆ ಹೋಗಿದ್ದು, ಅಲ್ಲಿ ಯಾವ ಯಾವ ಒಡವೆಗಳು ಕಳ್ಳತನ ಆಗಿವೆ ಎಂದು ನನ್ನನ್ನು ವಿಚಾರಿಸಲಾಗಿ ಆಗ ನಾನು ಒಂದು ಜೊತೆ ಓಲೆ ಮತ್ತು ಝುಮುಕಿ, 2 ಉಂಗುರ ಮತ್ತು 9 ಸಾವಿರ ರೂಗಳ ನಗದು ಹಣ ಕಳ್ಳತನವಾಗಿದೆ ಎಂದು

ತಿಳಿಸಿದ್ದು, ನಂತರ ಪೋಲೀಸರು ನನಗೆ ಜೊತೆ ಓಲೆ, ಝುಮುಕಿ ಮತ್ತು ಉಂಗುರಗಳನ್ನು ತೋರಿಸಿದ್ದು, ಅವುಗಳೇ ಕಳ್ಳತನವಾದ ವಸ್ತುಗಳೆಂದು ತಿಳಿಸಿದ್ದರಿಂದ ಪೋಲೀಸರು ಅವುಗಳನ್ನು ನನಗೆ ಕೊಟ್ಟಿರುತ್ತಾರೆ. ಆ ದಿನ ಪೋಲೀಸರು ಈಗ ನ್ಯಾಯಾಲಯದ ಮುಂದೆ ಇರುವ ಆರೋಪಿತರೇ ನಮ್ಮ ವಸ್ತುಗಳನ್ನು ಕಳ್ಳತನ ಮಾಡಿರುತ್ತಾರೆಂದು ನನಗೆ ತಿಳಿಸಿರುತ್ತಾರೆ ಎಂದು ಭಾಗಶಃ ಪ್ರತಿಕೂಲ ಸಾಕ್ಷ್ಯವನ್ನು ನುಡಿದಿರುತ್ತಾರೆ. ಸಹಾಯಕ ಸರ್ಕಾರಿ ಅಭಿಯೋಜಕರವರ ಪಾಟೀ ಸವಾಲಿನಲ್ಲಿ 30 ಗ್ರಾಂ ಬಂಗಾರದ ಕೊರಳ ಚೈನ್ ಸಹ ಕಳ್ಳತನವಾಗಿರುತ್ತದೆಂದು ದೂರಿನಲ್ಲಿ ಉಲ್ಲೇಖಿಸಲಾಗಿರುತ್ತದೆ ಎಂದರೆ ಸರಿ ಹಣ ಮತ್ತು ಒಡವೆ ಎಲ್ಲಾ ಸೇರಿ ರೂ.58,000/- ಗಳಾಗಬಹುದು ಎಂದರೆ ಸರಿ, ಸ್ಥಳ ಪಂಚನಾಮೆ ಮತ್ತು ಕಚ್ಚಾ ನಕ್ಷೆಯನ್ನು ತಯಾರಿಸಿರುತ್ತಾರೆಂದರೆ ಸರಿ, ಒಂದು ಒಪ್ಪಿಕೊಂಡಿದ್ದು ಅದರಲ್ಲಿರುವ ಸಹಿಯನ್ನು ನೋಡಿ ಗುರುತಿಸಿರುತ್ತಾರೆ.

12. ಮುಂದುವರೆದು ದಿನಾಂಕ 01/07/2018 ರಂದು ನಾನು ಠಾಣೆಗೆ ಹಾಜರಾಗಿ ಚಾಸಾ-16 ಠಾಣೆಯಲ್ಲಿ ಹಾಜರಿದ್ದು ಚಿಕ್ಕಜಾಜೂರು ಪೋಲಿಸ್ ಠಾಣಾ ಸಿಬ್ಬಂದಿ ಒಬ್ಬ ಹುಡುಗನನ್ನು ಹಾಜರುಪಡಿಸಿದ್ದು, ಆತನ ಹೆಸರು ನವೀನ್ ಎಂದು ತಿಳಿಸಿದ್ದು ಆತ ಪರಮೇಶಿ, ಹನುಮಂತ, ಚನ್ನಗಿರಿ ಪಾಪಣ್ಣ, ರವರ ಜೊತೆ ಸೇರಿ ಚಿಕ್ಕಜಾಜೂರು ಸಾಸಲು ಹನುಮನಕಟ್ಟೆ, ಮಲ್ಲಾಡಿಹಳ್ಳಿ ಗ್ರಾಮದಲ್ಲಿ ಕಳುವು ಮಾಡಿರುವುದಾಗಿ ಒಪ್ಪಿಕೊಂಡ ಮೇರೆಗೆ ವಶಕ್ಕೆ ಪಡೆದಿರುತ್ತೇವೆಂದು ಕಳುವುವಾಗಿದ್ದ ಒಡವೆಗಳನ್ನು ತೋರಿಸಿದ್ದು ಎರಡು ಬಂಗಾರದ ಉಂಗುರುಗಳು, ಒಂದು ಜೊತೆ ಓಲೆ ಜುಮಕಿ ಮಾತ್ರ ಇದ್ದು, ಅವುಗಳನ್ನು ಗುರುತಿಸಿದ ಬಗ್ಗೆ

ಹಾಗೂ ವಿತರಣಾ ಪಂಚನಾಮೆ ಜರುಗಿಸಿದ್ದ ಬಗ್ಗೆ ಸಾಕ್ಷ್ಯವನ್ನು ನುಡಿದಿರುತ್ತಾರೆ.

13. ಪ್ರಾ.ಸಾ.3/ಚಾ.ಸಾ.5 ರವಿಕುಮಾರ್ ರವರು ಸಾಂದರ್ಭಿಕ ಸಾಕ್ಷಿದಾರರಾಗಿದ್ದು, ತಮ್ಮ ಮುಖ್ಯ ವಿಚಾರಣೆಯಲ್ಲಿ 1 ರಿಂದ 4ನೇ ಆರೋಪಿತರು ಗೊತ್ತಿಲ್ಲ, 2013ನೇ ಇಸವಿಯಲ್ಲಿ ಚಾಸಾ-1 ರವರ ಮನೆಯಲ್ಲಿ ಕಳ್ಳತನವಾಗಿದ್ದು, ನಾನು ಅದೇ ಊರಿನವನಾಗಿದ್ದರಿಂದ ಅವರ ಮನೆಯ ಹತ್ತಿರ ಹೋದಾಗ ನನಗೆ ವಿಚಾರ ತಿಳಿದಿದ್ದು, ಅವರ ಮನೆಯಲ್ಲಿ ಒಂದು ಕೊರಳ ಚೈನು, ಎರಡು ಉಂಗುರ, ಒಂದು ಜೊತೆ ಓಲೆ ಮತ್ತು ರೂ.9000/ ನಗದು ಹಣ ಕಳ್ಳತನವಾಗಿದ್ದು, ಆ ಬಗ್ಗೆ ನಾಗರಾಜ್ ರವರು ಪೊಲೀಸ್ ಠಾಣೆಯಲ್ಲಿ ದೂರು ದಾಖಲಿಸಿರುತ್ತಾರೆ. ಸದರಿ ಕಳ್ಳತನವು ದಿ.17/06/2013 ರಂದು ಮದ್ಯಾಹ 2 ಗಂಟೆಯ ಸಮಯದಲ್ಲಿ ನಡೆದಿರುತ್ತದೆ. ಈ ಬಗ್ಗೆ ನಾನು ಪೊಲೀಸರ ಮುಂದೆ ಹೇಳಿಕೆ ನೀಡಿರುತ್ತೇನೆ ಎಂದು ಸಾಕ್ಷ್ಯವನ್ನು ನುಡಿದಿರುತ್ತಾರೆ.

14. ಪ್ರಾ.ಸಾ.4/ಚಾ.ಸಾ.4 ಎನ್.ವಿ.ನಾಗರಾಜ ರವರು ಸಾಂದರ್ಭಿಕ ಸಾಕ್ಷಿದಾರರಾಗಿದ್ದು, ತಮ್ಮ ಮುಖ್ಯ ವಿಚಾರಣೆಯಲ್ಲಿ ಆರೋಪಿತರು ನನಗೆ ಗೊತ್ತಿಲ್ಲ, ಚಾಸಾ-1 ರವರ ಮನೆಯಲ್ಲಿ ಕಳ್ಳತನವಾಗಿರುವ ವಿಚಾರವನ್ನು ಅವರೆ ನನಗೆ ತಿಳಿಸಿರುತ್ತಾರೆ. ಅವರ ಮನೆಯಲ್ಲಿದ್ದ ಒಂದು ಕೊರಳ ಚೈನ್, ಒಂದು ಉಂಗುರ, ಜುಮುಕಿ ಮತ್ತು ಓಲೆ ಹಾಗೂ ಒಂಬತ್ತು ಸಾವಿರ ನಗದು ಹಣವು ಚಾಸಾ-1 ರವರ ಮನೆಯಿಂದ ಕಳ್ಳತನವಾಗಿರುತ್ತದೆ ಎಂದು ಚಾಸಾ-1 ರವರು ನನಗೆ ತಿಳಿಸಿರುತ್ತಾರೆ. ಕಳ್ಳತನವಾದ ಮರುದಿನ ನಾನು ಪೊಲೀಸರಿಗೆ ನನ್ನ ಹೇಳಿಕೆಯನ್ನು

ನೀಡಿರುತ್ತೇನೆ. ಚಾಸಾ-1 ರವರ ಮನೆಯಲ್ಲಿದ್ದ ಹಣ ಮತ್ತು ಒಡವೆಗಳನ್ನು ಯಾರು ಕಳ್ಳತನ ಮಾಡಿದ್ದರು ಎಂಬುವುದು ನನಗೆ ಗೊತ್ತಿಲ್ಲ ಎಂದು ಪ್ರತಿಕೂಲ ಸಾಕ್ಷ್ಯವನ್ನು ನುಡಿದಿರುತ್ತಾರೆ.

15. ಪ್ರಾಸಾ.5/ಚಾಸಾ.6 ಮಂಜುನಾಥ ರವರು ಮಾಲು ಅಮಾನತ್ತು ಪಂಚನಾಮೆಗೆ ಪಂಚರಾಗಿ ಸಹಕರಿಸಿದ ಸಾಕ್ಷಿದಾರರಾಗಿದ್ದು, ತಮ್ಮ ಮುಖ್ಯ ವಿಚಾರಣೆಯಲ್ಲಿ ಈ ಪ್ರಕರಣದ ವಿಚಾರಗಳಾವುವು ಗೊತ್ತಿಲ್ಲ, ಅಮಾನತ್ತು ಪಂಚನಾಮೆಯ ಹಾಗೂ ಅದರಲ್ಲಿರುವ ಸಹಿಯನ್ನು ನಿಪಿ-5(ಎ) ಎಂದು ಗುತಿಸಲಾಗಿರುತ್ತದೆ ಎಂದು ನುಡಿದಿದ್ದು, ಸದರಿ ಸಹಿಯನ್ನು ಸುಮಾರು 12 ವರ್ಷಗಳ ಹಿಂದೆ ಪೋಲೀಸ್ ಠಾಣೆಯಲ್ಲಿ ಪೋಲಿಸರು ಹೇಳಿದ ಮೇರೆಗೆ ಸಹಿ ಮಾಡಿರುತ್ತೇನೆ. ನಿಪಿಃ 5 ರಲ್ಲಿ ಬರೆದಿರುವ ವಿಷಯ ನನಗೆ ಗೊತ್ತಿಲ್ಲ, ಅದನ್ನು ಪೋಲೀಸರು ಓದಿ ಹೇಳಿಲ್ಲ, ನನ್ನ ಸಮಕ್ಷಮ ಪೋಲಿಸರು ಯಾವುದೇ ಪಂಚನಾಮೆ ಮಾಡಿಲ್ಲ ಮತ್ತು ಯಾವುದೇ ವಸ್ತುಗಳನ್ನು ಅಮಾನತು ಪಡಿಸಿಕೊಂಡಿಲ್ಲ. ಈ ಸಂಬಂಧ ಪೋಲೀಸರು ನನ್ನನ್ನು ವಿಚಾರಣೆ ಮಾಡಿಲ್ಲ ಮತ್ತು ನಾನು ಪೋಲೀಸರ ಮುಂದೆ ಯಾವುದೇ ಹೇಳಿಕೆ ನೀಡಿಲ್ಲ ಎಂದು ಪಂಚನಾಮೆಗೆ ವ್ಯತಿರಿಕ್ತವಾಗಿ ಸಾಕ್ಷ್ಯವನ್ನು ನುಡಿದಿರುತ್ತಾರೆ.

16. ಪ್ರಾಸಾ.6 /ಚಾಸಾ.8 ಬಸವರಾಜ ರವರು ಬಂಗಾರದ ವಡವೆಗಳನ್ನು ಗುರುತಿಸಿ ತೂಕ ಮಾಡಿದ ಸಾಕ್ಷಿದಾರರಾಗಿದ್ದು, ತಮ್ಮ ಮುಖ್ಯ ವಿಚಾರಣೆಯಲ್ಲಿ ಮೃತ 1ನೇ ಆರೋಪಿ ನನಗೆ ಗೊತ್ತಿಲ್ಲ, ಚಾ.ಸಾ-6 ಮತ್ತು 7 ಗೊತ್ತಿಲ್ಲ. ಈ ಪ್ರಕರಣದ ವಿಚಾರಗಳಾವವು ನನಗೆ ಗೊತ್ತಿಲ್ಲ. ಪೋಲಿಸರು ನನ್ನನ್ನು ವಿಚಾರಿಸಿಲ್ಲ ಮತ್ತು ನಾನು

ಪೋಲೀಸರ ಮುಂದೆ ಯಾವುದೇ ಹೇಳಿಕೆಯನ್ನು ನೀಡಿಲ್ಲ ಎಂದು ಪ್ರತಿಕೂಲ ಸಾಕ್ಷ್ಯವನ್ನು ನುಡಿದಿರುತ್ತಾರೆ.

17. ಪ್ರಾ.ಸಾ.7/ಚಾಸಾ.11 ಆರ್.ಬಿ ಸ್ವಾಮಿ ರವರು 1ನೇ ಆರೋಪಿತನನ್ನು ಹಿಡಿದು ತನಿಖಾಧಿಕಾರಿಯ ಮುಂದೆ ಹಾಜರುಪಡಿಸಿದ ಬಗ್ಗೆ ಹೇಳಿಕೆ ನೀಡಿರುವ ಸಾಕ್ಷಿದಾರರಾಗಿದ್ದು, ತಮ್ಮ ಮುಖ್ಯ ವಿಚಾರಣೆಯಲ್ಲಿ ದಿನಾಂಕ 01/07/2013 ರಂದು ಚಾಸಾ-16 ರವರ ಆದೇಶದಂತೆ ಚಿಕ್ಕ ಜಾಜೂರು ಪೊಲೀಸ್ ಠಾಣೆಯ ಮೊ. ನಂ.128/2013 ರ ಕಲಂ 457, 380 ಐಪಿಸಿ ಪ್ರಕರಣದಲ್ಲಿ ಆರೋಪಿ ಮತ್ತು ಮಾಲುಗಳ ಪತ್ತೆಗಾಗಿ ನನ್ನನ್ನು ಮತ್ತು ಚಾಸಾ-12 ಮತ್ತು 13 ರವರನ್ನು ನೇಮಿಸಿದ್ದು, ಅದರಂತೆ ನಾವುಗಳು ಸಾಸಲುಹಳ್ಳ ಸರ್ಕಲ್ ಬಳಿ ಗಸ್ತು ಮಾಡುತ್ತಿರುವಾಗ ಸಂಜೆ ಸಮಯದಲ್ಲಿ ನಮ್ಮನ್ನು ನೋಡಿ ಎದುರಿಗೆ ಬರುತ್ತಿದ್ದ ಯಾರೋ ಒಬ್ಬ ಆಸಾಮಿಯು ಓಡಿ ಹೋಗಲು ಪ್ರಯತ್ನಿಸುತ್ತಿದ್ದವನನ್ನು ನಾವು ಅವನನ್ನು ಹಿಂಬಾಲಿಸಿ ಹಿಡಿದು ಏಕೆ ನಮ್ಮನ್ನು ನೋಡಿ ಓಡಿ ಹೋಗುತ್ತಿದ್ದೀಯಾ ಎಂದು ವಿಚಾರ ಮಾಡಲಾಗಿ ಸಮಂಜಸವಾದ ಉತ್ತರ ನೀಡಿರುವುದಿಲ್ಲ ಹಾಗೂ ಆತನ ಹೆಸರನ್ನು ಕೇಳಲಾಗಿ ನವೀನ ಯಾನೆ ಸ್ವಾಮಿ ತಂದೆ ಗಂಗಣ್ಣ, ಸುಮಾರು 19 ವರ್ಷ ಶಿವನಿ ಗ್ರಾಮ, ತರೀಕೆರೆ ತಾಲ್ಲೂಕು ಎಂದು ತಿಳಿಸಿದ್ದು, ಆತನನ್ನು ಸಂಜೆ 7 ಗಂಟೆಗೆ ಸಿಪಿಐ ಸಾಹೇಬರವರ ಮುಂದೆ ತಂದು ಹಾಜರುಪಡಿಸಿರುತ್ತೇವೆ. ಸದರಿಯವರನ್ನು ಮಾನ್ಯ ಸಿಪಿಐ ಸಾಹೇಬರವರು ಪಂಚರ ಸಮಕ್ಷಮ ವಿಚಾರಿಸಿ ಚೆಕ್ ಮಾಡಲಾಗಿ ಸದರಿಯವನ ಪ್ಯಾಂಟ್ ಜೇಬಿನಲ್ಲಿಒಂದು ಬಂಗಾರದ ಕೊರಳ ಜೈನು ದೊರೆತಿದ್ದು, ಅದರ ಬಗ್ಗೆ ವಿಚಾರ ಮಾಡಲಾಗಿ, ನಮ್ಮ ಠಾಣೆಯ ಮೊ.ನಂ.128/13 ರ ಪ್ರಕರಣಕ್ಕೆ ಸಂಬಂಧಿಸಿದ್ದಾಗಿದ್ದು, ಆತನನ್ನು ದಸ್ತಗಿರಿ ಮಾಡಿ ನಂತರ ದಿನಾಂಕ

30/07/2013 ರಂದು ಈ ಕೇಸಿನಲ್ಲಿ ತಲೆ ಮರೆಸಿಕೊಂಡಿದ್ದ ಹನುಮಂತ, ಪರಮೇಶಿ ಮತ್ತು ಪಾಪಣ್ಣ ಇವರನ್ನು ಪತ್ತೆ ಮಾಡಲು ನಮ್ಮನ್ನು ನೇಮಿಸಿ ಕಳುಹಿಸಿದ್ದು, ನಾನು ಮೊದಲಿಗೆ ತರೀಕೆರೆ ತಾಲ್ಲೂಕು ಶಿವನಿ ಗ್ರಾಮಕ್ಕೆ ಹೋಗಿ ಸದರಿಯವರ ಬಗ್ಗೆ ವಿಚಾರಿಸಲಾಗಿ ಅವರು ಸುಮಾರು ದಿನಗಳಿಂದ ಗ್ರಾಮದಲ್ಲಿ ಹಾಜರಿ ಇರುವುದಿಲ್ಲವೆಂದು ತಿಳಿದು ಬಂದಿರುತ್ತದೆ. ಸದರಿಯವರ ಪೂರ್ಣ ವಿಳಾಸವನ್ನು ವಿಚಾರಿಸಲಾಗಿ ಪರಮೇಶ್ ತಂದೆ ಸೋಮಣ್ಣ, ಹನುಮಂತಪ್ಪ ತಂದೆ ಜಾಲೂರಪ್ಪ, ಶಿವನಿ ಗ್ರಾಮ, ತರೀಕೆರೆ ತಾಲ್ಲೂಕು ಎಂದು ತಿಳಿದು ಬಂದಿದ್ದು, ನಂತರ ಚನ್ನಗಿರಿ ಗ್ರಾಮಕ್ಕೆ ಹೋಗಿದ್ದು ಪಾಪಣ್ಣರವರ ಬಗ್ಗೆ ಬಾತ್ಮಿದಾರರಲ್ಲಿ ವಿಚಾರ ಮಾಡಲಾಗಿ ಆತನೂ ಸಹ ಸುಮಾರು ದಿನಗಳಿಂದ ಗ್ರಾಮದಲ್ಲಿ ಇರುವುದಿಲ್ಲ ಎಂದು ತಿಳಿದು ಬಂದಿದ್ದು ಆತನ ಸಂಪೂರ್ಣ ವಿಳಾಸ ವಿಚಾರಿಸಲಾಗಿ ಪಾಪಣ್ಣ ಯಾನೆ ನಾಗರಾಜ್ ತಂದೆ ಸತ್ಯಪ್ಪ, ಚನ್ನಗಿರಿ ಗ್ರಾಮ, ಚನ್ನಗಿರಿ ತಾಲೂಕು ಎಂದು ತಿಳಿದು ಬಂದಿದ್ದು, ಸದರಿ ವಿಚಾರಗಳೆಲ್ಲವನ್ನೂ ಕಚೇರಿಗೆ ಮರಳಿ ಬಂದು ಸಿಪಿಐ ಸಾಹೇಬರವರಿಗೆ ವರದಿ ಮಾಡಿರುತ್ತೇನೆ ಮತ್ತು ಆ ಬಗ್ಗೆ ದಿನಾಂಕ 31/07/2013 ರಂದು ತನಿಖಾಧಿಕಾರಿಗಳ ಮುಂದೆ ನನ್ನ ಹೇಳಿಕೆ ನೀಡಿರುತ್ತೇನೆ ಎಂದು ಸಾಕ್ಷ್ಯವನ್ನು ನುಡಿದಿರುತ್ತಾರೆ.

18. ಪ್ರಾ.ಸಾ.8/ಚಾ.ಸಾ.13 ಸುರೇಶ್ ರವರು 1ನೇ ಆರೋಪಿತನನ್ನು ಹಿಡಿದು ತನಿಖಾಧಿಕಾರಿಯ ಮುಂದೆ ಹಾಜರುಪಡಿಸಿ ಹೇಳಿಕೆ ನೀಡಿರುವ ಸಾಕ್ಷಿದಾರರಾಗಿದ್ದು, ತಮ್ಮ ಮುಖ್ಯ ವಿಚಾರಣೆಯಲ್ಲಿ ದಿನಾಂಕ 01/07/2013 ರಂದು ಚಾ.ಸಾ-16 ರವರ ಆದೇಶದಂತೆ ಚಿಕ್ಕಜಾಜೂರು ಪೊಲೀಸ್ ಠಾಣೆಯ ಮೊ.ನಂ.128/2013 ರ ಕಲಂ 457, 380 ಐಪಿಸಿ ಪ್ರಕರಣದಲ್ಲಿ ಆರೋಪಿ ಮತ್ತು ಮಾಲುಗಳ ಪತ್ತೆಗಾಗಿ ನನ್ನನ್ನು

ಮತ್ತು ಚಾಸಾ-11 ಮತ್ತು 12 ರವರನ್ನು ನೇಮಿಸಿದ್ದು, ಅದರಂತೆ ನಾವುಗಳು ಅದೇ ದಿನ ಸಾಸಲುಹಳ್ಳ ಸರ್ಕಲ್ ಬಳಿ ಗಸ್ತು ಮಾಡುತ್ತಿರುವಾಗ ಸಂಜೆ 6 ಗಂಟೆ ಸಮಯದಲ್ಲಿ ನಮ್ಮನ್ನು ನೋಡಿ ಎದುರಿಗೆ ಬರುತ್ತಿದ್ದ ಯಾರೋ ಒಬ್ಬ ಆಸಾಮಿಯು ಓಡಿ ಹೋಗಲು ಪ್ರಯತ್ನಿಸುತ್ತಿದ್ದವನನ್ನು ಅನುಮಾನದ ಮೇಲೆ ಹಿಂಬಾಲಿಸಿ ಹಿಡಿದು ಏಕೆ ನಮ್ಮನ್ನು ನೋಡಿ ಓಡಿ ಹೋಗುತ್ತಿದ್ದೀಯಾ ಎಂದು ವಿಚಾರ ಮಾಡಲಾಗಿ ಸಮಂಜಸವಾದ ಉತ್ತರ ನೀಡಿರುವುದಿಲ್ಲ. ಹಾಗೂ ಆತನ ಹೆಸರನ್ನು ಕೇಳಲಾಗಿ ನವೀನ ಯಾನೆ ಸ್ವಾಮಿ ತಂದೆ ಗಂಗಣ್ಣ, ಸುಮಾರು 22 ವರ್ಷ, ಶಿವನಿ ಗ್ರಾಮ, ತರೀಕೆರೆ ತಾಲ್ಲೂಕು ಎಂದು ತಿಳಿಸಿದ್ದು, ಆತನನ್ನು ಸಂಜೆ 7 ಗಂಟೆಗೆ ಸಿಪಿಐ ಸಾಹೇಬರವರ ಮುಂದೆ ತಂದು ಹಾಜರುಪಡಿಸಿರುತ್ತೇವೆ ಸದರಿಯವನನ್ನು ಮಾನ್ಯ ಸಿಪಿಐ ಸಾಹೇಬರವರು ವಿಚಾರಿಸಲಾಗಿ ಆತ ಇತರ ಪರಮೇಶಿ ಹನುಮಂತ ಮತ್ತು ಚನ್ನಗಿರಿಯ ಆರೋಪಿತರಾದ ಶಿವನಿ ಗ್ರಾಮದ ಗ್ರಾಮಗಳಲ್ಲಿ ಕಳವು ಮಾಡಿದ್ದಾಗಿ ಒಪ್ಪಿಕೊಂಡಿದ್ದರ ಮೇರೆಗೆ ಚಾಸಾ-16 ರವರು ಆತನನ್ನು ವಶಕ್ಕೆ ಪಡೆದುಕೊಂಡು ಚಿಕ್ಕಜಾಜೂರು ಪೊಲೀಸ್ ಠಾಣೆ ಮೊ.ನಂ.126/2013, 128/2013, 219/2011 ಮತ್ತು ಹೊಳಲ್ಕೆರೆ ಪೊಲೀಸ್ ಠಾಣೆ ಮೊ.ನಂ.470/2013 ರ ಪ್ರಕರಣಗಳಲ್ಲಿ ಕಳವು ಮಾಡಿದ ಒಡವೆಗಳನ್ನು ವಶಕ್ಕೆ ಪಡೆದುಕೊಂಡಿರುತ್ತಾರೆ. ಈ ಬಗ್ಗೆ ದಿನಾಂಕ 05/07/2013 ರಂದು ತನಿಖಾಧಿಕಾರಿಗಳ ಮುಂದೆ ನನ್ನ ಹೇಳಿಕೆ ನೀಡಿರುತ್ತೇನೆ. ದಿನಾಂಕ 24/07/2013 ರಂದು ಚಾಸಾ-16 ರವರ ಆದೇಶದ ಮೇರೆಗೆ ಈ ಪ್ರಕರಣದಲ್ಲಿ ವಶಪಡಿಸಿಕೊಂಡ ಮುದ್ದೆ ಮಾಲನ್ನು ಪಿರ್ಯಾದಿಗೆ ವಾಪಾಸು ನೀಡಲು ನ್ಯಾಯಾಲಯದ ಆದೇಶವಾಗಿದ್ದರಿಂದ ಚಾಸಾ-9 ಮತ್ತು 10 ರವರ ಸಮಕ್ಷಮ ನಿಪಿ-4 ರಂತೆ ಬೆಳಿಗ್ಗೆ 10 ರಿಂದ 11 ಗಂಟೆಯವರೆಗೆ ಮಾಲು ವಿತರಣಾ ಪಂಚನಾಮೆ ಕ್ರಮ ಜರುಗಿಸಿ

ಪಿರ್ಯಾದಿಗೆ 2 ಬಂಗಾರದ ಉಂಗುರಗಳು ಮತ್ತು ಒಂದು ಜೊತೆ ಜುಮುಕಿಯನ್ನು ನೀಡಿರುತ್ತೇವೆ. ಸದರಿ ಪಂಚನಾಮೆಗೆ ಸಹಿ ಮಾಡಿರುತ್ತೇನೆ. ಎಂದು ಸಾಕ್ಷ್ಯವನ್ನು ನುಡಿದಿರುತ್ತಾರೆ.

19. ಪ್ರಾ.ಸಾ.9/ ಚಾಸಾ.15 ಕೆ.ಟಿ.ರಮೇಶ್ ರವರು ಈ ಪ್ರಕರಣದಲ್ಲಿ ಭಾಗಶಃ ತನಿಖಾಧಿಕಾರಿಯಾಗಿದ್ದು, ತಮ್ಮ ಮುಖ್ಯ ವಿಚಾರಣೆಯಲ್ಲಿ ದಿನಾಂಕಃ18/06/2013 ರಂದು ಚಾಸಾ-1 ರವರು ಠಾಣೆಗೆ ಹಾಜರಾಗಿ ನೀಡಿದ ಲಿಖಿತ ದೂರನ್ನು ಸ್ವೀಕರಿಸಿಕೊಂಡು ಠಾಣಾ ಮೊಕದ್ದಮೆ ಸಂ.470/2013 ದಾಖಲಿಸಿಕೊಂಡು ಪ್ರಥಮ ವರ್ತಮಾನ ಘನ ನ್ಯಾಯಾಲಯಕ್ಕೂ ಮತ್ತು ನನ್ನ ಮೇಲಧಿಕಾರಿಗಳಿಗೂ ನಿವೇದಿಸಿಕೊಂಡಿರುತ್ತೇನೆ, ನಂತರ ಅದೇ ದಿನ ಕೃತ್ಯ ನಡೆದ ಸ್ಥಳಕ್ಕೆ ಭೇಟಿ ನೀಡಿ ಚಾಸಾ-1 ರವರು ತೋರಿಸಿದ ಸ್ಥಳದಲ್ಲಿ ಚಾಸಾ-2 ಮತ್ತು 3 ರವರ ಸಮಕ್ಷಮ ಮಧ್ಯಾಹ್ನ 12 ರಿಂದ 12.45 ಗಂಟೆಯವರೆಗೆ ಸ್ಥಳ ಪಂಚನಾಮೆ ಕ್ರಮವನ್ನು ಜರುಗಿಸಿ ಕಚ್ಚಾ ನಕಾಶೆಯನ್ನು ತಯಾರಿಸಿರುತ್ತೇನೆ. ನಂತರ ಅಲ್ಲಿಯೇ ಇದ್ದ ಸಾಕ್ಷಿದಾರರಾದ ಚಾಸಾ-4 ಮತ್ತು 5 ರವರ ಹೇಳಿಕೆಗಳನ್ನು ಪಡೆದಿರುತ್ತೇನೆ. ನಂತರ ಪ್ರಸ್ತುತ ಪ್ರಕರಣವು ಘೋರ ಪ್ರಕರಣವಾಗಿದ್ದರಿಂದ ಮುಂದಿನ ತನಿಖೆಗಾಗಿ ಕಡತವನ್ನು ಚಾಸಾ-16 ರವರಿಗೆ ವಹಿಸಿಕೊಟ್ಟಿರುತ್ತೇನೆ ಎಂದು ಸಾಕ್ಷ್ಯವನ್ನು ನುಡಿದಿರುತ್ತಾರೆ.

20. ಪ್ರಾ.ಸಾ.10/ಚಾಸಾ.16 ಕೆ.ಬಿ.ಶ್ರೀಧರ ರವರು ಪ್ರಕರಣದ ಅಂತಿಮ ತನಿಖಾಧಿಕಾರಿಯಾಗಿದ್ದು, ತಮ್ಮ ಮುಖ್ಯ ವಿಚಾರಣೆಯಲ್ಲಿ ದಿನಾಂಕ 19.06.2013 ರಂದು ಈ ಪ್ರಕರಣದ ಕಡತವನ್ನು ಚಾಸಾ.15 ರವರಿಂದ ಪಡೆದುಕೊಂಡು ಅಲ್ಲಿಯವರೆಗಿನ ತನಿಖೆಯನ್ನು ಪರಿಶೀಲಿಸಿರುತ್ತೇನೆ. ಅದೇ ದಿನ ಚಾಸಾ-14 ರವರ ಹೇಳಿಕೆಯನ್ನು

ಪಡೆದುಕೊಂಡಿರುತ್ತೇನೆ. ದಿನಾಂಕ 01.07.2013 ರಂದು ಚಿಕ್ಕಜಾಜೂರು ಪೊಲೀಸ್ ಠಾಣೆಯಲ್ಲಿ ಇರುವಾಗ ಚಾಸಾ.11 ರಿಂದ 13 ರವರು 1 ನೇ ಆರೋಪಿತನನ್ನು ಹಿಡಿದುಕೊಂಡು ಬಂದು ನನ್ನ ಸಮಕ್ಷಮ ಹಾಜರುಪಡಿಸಿದ್ದು, ದಸ್ತಗಿರಿ ಮಾಡಿರುತ್ತೇನೆ. 1 ನೇ ಆರೋಪಿತನಿಂದ ಸ್ವ ಇಚ್ಛಾ ಹೇಳಿಕೆಯನ್ನು ಪಡೆದುಕೊಂಡಿರುತ್ತೇನೆ. 1 ನೇ ಆರೋಪಿತನು ನೀಡಿದ ಸ್ವ ಇಚ್ಛಾ ಹೇಳಿಕೆಯನ್ನು ನಿಪಿ.8 ಎಂದು ಹಾಗೂ ಅದರಲ್ಲಿರುವ ಸಹಿಯನ್ನು ನಿಪಿ.8(ಎ) ಎಂದು, 1 ನೇ ಆರೋಪಿತನ ಸಹಿಯನ್ನು ನಿಪಿ.8(ಬಿ) ಎಂದು ಗುರುತಿಸಲಾಗಿರುತ್ತದೆ, 1 ನೇ ಆರೋಪಿತನು ಸಾಸಲು ಗ್ರಾಮ, ಮಲ್ಲಾಡಿಹಳ್ಳಿ ಮತ್ತು ಚಿಕ್ಕಜಾಜೂರಿನ ಹೊಸನಗರ ಹಾಗೂ ಹನುಮಂತ ಕಟ್ಟೆಯಲ್ಲಿ ನಾನು ಹಾಗೂ ನನ್ನ ಸಂಗಡಿಗರಾದ 2 ರಿಂದ 4 ನೇ ಆರೋಪಿತರು ಕಳುವು ಮಾಡಿರುವುದಾಗಿ ಹೇಳಿಕಯನ್ನು ನೀಡಿರುತ್ತಾರೆ. 1 ನೇ ಆರೋಪಿತನು ಆತನ ಪಾಲಿನ ಕಳವು ಮಾಡಿದ ಅಭರಣಗಳನ್ನು ಮನೆಯಲ್ಲಿ ಇಟ್ಟಿರುವುದಾಗಿ ಹೇಳಿದ್ದು, ತನ್ನೊಂದಿಗೆ ಬಂದರೆ ತೋರಿಸುವುದಾಗಿ ಹೇಳಿರುತ್ತಾರೆ, ದಿನಾಂಕ 04/07/2013 ರಂದು ಆರೋಪಿತನು ಆತನ ಮನೆಗೆ ಕರೆದುಕೊಂಡು ಹೋಗಿದ್ದು, ಪಂಚರಾದ ಚಾಸಾ.6 ಮತ್ತು 7 ರವರ ಸಮಕ್ಷಮ ಬಂಗಾರದ ಒಡವೆಗಳನ್ನು ಪರಿಶೀಲಿಸುವ ಚಾಸಾ.8 ರವರ ಸಮಕ್ಷಮ 40 ಗ್ರಾಂನ ಬಂಗಾರದ ಮಾಂಗಲ್ಯದ ಸರವನ್ನು, 11 ಗ್ರಾಂ ಒಂದು ಗೋದಿ ಗುರುತಿನ ಬಂಗಾರದ ಸರ, 3 ಗ್ರಾಂನ ಒಂದು ಜೊತೆ ಬಂಗಾರದ ಲಕ್ಷ್ಮಿ ಓಲೆಗಳು, 13 ಗ್ರಾಂನ ಎರಡು ಬಂಗಾರದ ಉಂಗುರಗಳನ್ನು ಮತ್ತು ಒಂದು ಜೊತೆ 6 ಗ್ರಾಂನ ಬಂಗಾರದ ಜುಮುಕಿಯನ್ನು ಅಮಾನತ್ತುಪಡಿಸಿಕೊಂಡಿರುತ್ತೇನೆ. ಅಮಾನತ್ತುಪಡಿಸಿಕೊಂಡ ಆಭರಣಗಳ ಒಂದು ಮಾಲುಪಟ್ಟಿಯಲ್ಲಿ ಉಲ್ಲೇಖಿಸಿ ನ್ಯಾಯಾಲಯಕ್ಕೆ ನಿವೇಧಿಸಿಕೊಂಡಿರುತ್ತೇನೆ, ನಂತರ

ಆರೋಪಿತನನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿರುತ್ತೇನೆ. ದಿನಾಂಕ 05.07.2013 ರಂದು ಸಾಕ್ಷಿದಾರರಾದ ಚಾಸಾ.6 ರಿಂದ 8, ಚಾಸಾ.12 ಮತ್ತು 13 ರವರ ಹೇಳಿಕೆಗಳನ್ನು ಪಡೆದುಕೊಂಡಿರುತ್ತೇನೆ. ದಿ.24.07.2013 ರಂದು ನ್ಯಾಯಾಲಯದಿಂದ ಚಾಸಾ.1 ರವರು ಪಡೆದಂತಹ ಆದೇಶವನ್ನು ಹಾಜರುಪಡಿಸಿದ್ದು, ಚಾಸಾ.9 ಮತ್ತು 10 ರವರ ಸಮಕ್ಷಮ ಅಮಾನತ್ತುಪಡಿಸಿಕೊಂಡ ಆಭರಣಗಳನ್ನು ಮಧ್ಯಂತರ ವಶಕ್ಕೆ ನೀಡಿರುತ್ತೇನೆ, ಅದೇ ಸಮಯದಲ್ಲಿ ಚಾಸಾ.1 ರವರಿಂದ ಮರು ಹೇಳಿಕೆಯನ್ನು ಪಡೆದಿರುತ್ತೇನೆ. ದಿನಾಂಕ 31.07.2013 ರಂದು ಚಾಸಾ.11 ರವರ ಹೇಳಿಕೆಯನ್ನು ಪಡೆದುಕೊಂಡಿರುತ್ತೇನೆ. ಆರೋಪಿತರ ವಿರುದ್ಧ ಆರೋಪ ರುಜುವಾತಾದ ಹಿನ್ನೆಲೆಯಲ್ಲಿ ನ್ಯಾಯಾಲಯಕ್ಕೆ ದೋಷಾರೋಣಾ ಪಟ್ಟಿಯನ್ನು ಸಲ್ಲಿಸಿರುತ್ತೇನೆ. ದಸ್ತಗಿರಿ ಮಾಡಿದ್ದ 1 ನೇ ಆರೋಪಿ ಮೃತಪಟ್ಟಿರುತ್ತಾನೆ ಎಂದು ಸಾಕ್ಷ್ಯವನ್ನು ನುಡಿದಿರುತ್ತಾರೆ.

21. ಪ್ರಾಸಾ.11/ಚಾಸಾ.7 ಅಂಜಿನಪ್ಪ ರವರು ಮಾಲು ಅಮಾನತ್ತು ಪಂಚನಾಮೆಗೆ ಪಂಚರಾಗಿ ಸಹಕರಿಸಿದ ಸಾಕ್ಷಿದಾರರಾಗಿದ್ದು, ತಮ್ಮ ಮುಖ್ಯ ವಿಚಾರಣೆಯಲ್ಲಿ ನಿಪಿ-5 ರ ಅಮಾನತ್ತು ಪಂಚನಾಮೆ ಹಾಗೂ ಅದರಲ್ಲಿರುವ ಸಹಿಯನ್ನು ನಿಪಿ-5(ಬಿ) ಎಂದು ಗುರುತಿಸಲಾಗಿದ್ದು ಅದರಲ್ಲಿರುವ ಸದರಿ ಸಹಿಯನ್ನು ಸುಮಾರು ವರ್ಷಗಳ ಹಿಂದೆ ಪೊಲೀಸ್ ಠಾಣೆಯಲ್ಲಿ ಸಹಿ ಮಾಡಿರುತ್ತೇನೆ. ಈ ವಿಚಾರಕ್ಕೆ ಸಹಿ ಮಾಡಿರುತ್ತೇನೆ ಎಂದು ಗೊತ್ತಿಲ್ಲ, ನನ್ನ ಸಮಕ್ಷಮದಲ್ಲಿ ಯಾವುದೇ ಆಭರಣಗಳನ್ನು ಅಮಾನತ್ತುಪಡಿಸಿಕೊಂಡಿಲ್ಲ. ಈ ಸಂಬಂಧ ಪೊಲೀಸರ ಮುಂದೆ ಯಾವುದೇ ಹೇಳಿಕೆ ನೀಡಿರುವುದಿಲ್ಲ ಎಂದು ಸಾಕ್ಷ್ಯವನ್ನು ನುಡಿದಿರುತ್ತಾರೆ.

22. ಮೇಲ್ಕಂಡ ಅಭಿಯೋಜನೆಯ ಪರ ವಿಚಾರಣೆಗೊಳಪಟ್ಟ

ಸಾಕ್ಷಿದಾರರಾದ ಪ್ರಾಸಾ-1 ರಿಂದ ಪ್ರಾಸಾ-11 ರವರ ಮೌಖಿಕ ಹೇಳಿಕೆಗಳನ್ನು ಅಭಿಯೋಜನೆಯ ಆರೋಪಿತರ ವಿರುದ್ಧ ರುಜುವಾತುಗಾಗಿ ಗುರುತಿಸಿಕೊಂಡಿರುವ ನಿಪಿ-1 ರಿಂದ 9 ದಾಖಲೆಗಳನ್ನು ಕೂಲಂಕುಷವಾಗಿ ಪರಿಶೀಲಿಸಿರುತ್ತದೆ, ಆರೋಪಿತರ ಮೇಲಿನ ಆರೋಪವು ಮೇಲ್ಕಂಡ ಮೌಖಿಕ ಹೇಳಿಕೆ ಮತ್ತು ದಾಖಲಾತಿಗಳ ಮೂಲಕ ಅಭಿಯೋಜನೆಯು ರುಜುವಾತುಪಡಿಸಿರುತ್ತದೆಯೇ ಎಂಬುದನ್ನು ಕಂಡುಕೊಳ್ಳಲು ಅಭಿಯೋಜನೆಯ ಪರ ನೀಡಿರುವ ಸಾಕ್ಷಿದಾರರ ಹೇಳಿಕೆಗಳು ಮತ್ತು ಗುರುತಿಸಿಕೊಂಡಿರುವ ದಾಖಲೆಗಳಲ್ಲಿ ಹಾಗೂ ಪಾಟೀ ಸವಾಲಿನಲ್ಲಿ ನೀಡಿರುವ ಉತ್ತರಗಳನ್ನು ತುಲನಾತ್ಮಕವಾಗಿ ಚರ್ಚಿಸುವುದು ಅಗತ್ಯವಿರುತ್ತದೆ.

23. ಪ್ರಾಸಾ-1 ರವರು ನಿಪಿ-1 ರ ಸ್ಥಳ ಪಂಚನಾಮೆಯ ಸಾಕ್ಷಿದಾರರಾಗಿದ್ದು, ಸಂಪೂರ್ಣ ಪ್ರತಿಕೂಲ ಸಾಕ್ಷಿದಾರರಾಗಿದ್ದು ನಿಪಿ-1 ಕ್ಕೆ ನಮ್ಮ ಊರಿನ ಬಸ್ ನಿಲ್ದಾಣದಲ್ಲಿ ಸಹಿ ಮಾಡಿರುತ್ತೇನೆ, ಏನು ಬರೆದಿದೆ ಎಂದು ಗೊತ್ತಿಲ್ಲ, ಅದರ ವಿಚಾರಗಳನ್ನು ಓದಿ ಹೇಳಿಲ್ಲ ಎಲ್ಲಿ ಯಾವಗ ಬರೆಯಿತು ಎಂದು ಗೊತ್ತಿಲ್ಲ ನನ್ನ ಜೊತೆ ಯಾರು ಸಹಿ ಮಾಡಿರುತ್ತಾರೆ ಎಂಬುದು ಸಹ ಗೊತ್ತಿಲ್ಲ, ಪೋಲಿಸರು ಚಾಸಾ-1 ರವರು ಯಾವುದೇ ಸ್ಥಳ ತೋರಿಸಿಲ್ಲ ಪೋಲಿಸರು ನನ್ನ ಸಮಕ್ಷಮ ಯಾವುದೇ ಕಚ್ಚಾ ನಕ್ಷೆಯನ್ನು ತಯಾರು ಮಾಡಿಲ್ಲ ಎಂದು ಸಾಕ್ಷ್ಯವನ್ನು ನುಡಿದಿದ್ದು ಅಭಿಯೋಜನೆಗೆ ಪೂರಕವಾದ ಸಾಕ್ಷ್ಯವನ್ನು ನುಡಿದಿರುವುದಿಲ್ಲ.

24. ಪ್ರಾಸಾ-2 ದೂರುದಾರಾಗಿದ್ದು ತಮ್ಮ ಮುಖ್ಯ ವಿಚಾರಣೆ ವೇಳೆ ಮಧ್ಯಾಹ್ನ 2-00 ಗಂಟೆಗೆ ಮನೆಗೆ ಊಟಕ್ಕೆ ಹೋದಾಗ ಮನೆಯ

ಬೀಗವನ್ನು ಹೊಡೆದು ಮನೆಯ ಬಿರುವಿನ ಬೀಗವನ್ನು ಮುರಿದು ಅದರಲ್ಲಿದ್ದ ರೂ 9 ರೂ ಹಣ ಒಂದು ಜೊತೆ ಓಲೆ ಮತ್ತು ಜುಮಕಿ ಮತ್ತು ಎರಡು ಬಂಗಾರದ ಉಂಗುರಗಳು ಕಳ್ಳತನವಾಗಿದ್ದು ಒಡವೆಗಳ ಒಟ್ಟು ರೂ 49,000/- ಸಾವಿರ ಎಂದು ಸಾಕ್ಷ್ಯವನ್ನು ನುಡಿದಿದ್ದು ಚಿಕ್ಕಜಾಜೂರು ಪೋಲಿಸರು ಆರೋಪಿತರು ಪತ್ತೆಯಾಗಿರುವ ಬಗ್ಗೆ ತಿಳಿಸಿರುತ್ತಾರೆಂದು ಒಡವೆಗಳ ಬಗ್ಗೆ ಪೋಲಿಸರು ವಿಚಾರಿಸಿದ್ದು ಒಂದು ಜೊತೆ ಓಲೆ ಜುಮಕಿ ಎರಡು ಉಂಗುರಗಳು ರೂ 9 ಸಾವಿರ ನಗದು ಎಂದು ತಿಳಿಸಿದ್ದು ಓಲೆ ಜುಮಕಿ ಉಂಗುರಗಳನ್ನು ಪೋಲಿಸರು ಹಿಂತಿರುಗಿಸಿರುತ್ತಾರೆಂದು ತಿಳಿಸಿರುತ್ತಾರೆ. ಭಾಗಶಃ ಪ್ರತಿಕೂಲ ಸಾಕ್ಷಿದಾರರಾಗಿದ್ದು ಅಭಿಯೋಜಕರ ಪಾಟೀ ಸವಾಲಿನಲ್ಲಿ 30 ಗ್ರಾಂ ತೂಕದ ಒಂದು ಕೊರಳ ಚೈನು ಕಳ್ಳತನವಾಗಿರುತ್ತದೆ ಎಂದು ಅಭಿಯೋಜಕರು ಸೂಚಿಸಿದ ಪ್ರಶ್ನೆಗೆ ಸಾಕ್ಷಿ ಒಪ್ಪಿಕೊಂಡಿದ್ದು ಈ ಹಂತದಲ್ಲಿ ದೂರನ್ನು ಗುಮನಿಸಿದಾಗ್ಗೆ ದೂರಿನಲ್ಲಿಬಂಗಾರದ ಕೊರಳ ಚೈನು ಸುಮಾರು 15 ಗ್ರಾಂ ತೂಕ ಎಂದು ನಮೂದಿಸಿದ್ದು, ಅಭಿಯೋಜಕರು ಸೂಚಿಸಿರುವ ಪ್ರಶ್ನೆಯು ಸಮಂಜಸವಾಗಿರುವುದಿಲ್ಲ ಕಾರಣ ದೂರಿನಲ್ಲಿ 15 ಗ್ರಾಂ ಎಂದು ಉಲ್ಲೇಖಿಸಿರುವುದು ಸ್ಪಷ್ಟವಾಗಿ ನಮೂದಿಸಿರುವುದು ಅಭಿಯೋಜಕರ ಸೂಚನಾತ್ಮಕ ಪ್ರಶ್ನೆಯಲ್ಲಿ ಯಾವುದೇ ಸತ್ಯತೆ ಇರುವುದಿಲ್ಲ ಎಂದು ಕಂಡುಬರುತ್ತದೆ ಹಾಗೂ ಅನುಮಾನ ವ್ಯಕ್ತವಾಗುತ್ತದೆ ಅನುಮಾನ ಅನುಕೂಲತೆ ಆರೋಪಿತರ ಪರವಾಗಿ ಪರಿಗಣಿಸುವುದು ಸೂಕ್ತವಾಗಿರುತ್ತದೆ.

25. ಅಭಿಯೋಜಕರ ಪಾಟೀ ಸವಾಲಿನಲ್ಲಿ ಪ್ರಾಸಾ-2 ರವರು ಚಿಕ್ಕಜಾಜೂರು ಪೋಲಿಸರು ದಿನಾಂಕ 01/07/2013 ರಂದು ಒಬ್ಬ ಹುಡುಗನನ್ನು ನನ್ನ ಮುಂದೆ ಹಾಜರುಪಡಿಸಿದ್ದು ಆತನ ಹೆಸರು ನವೀನ ಎಂದು ತಿಳಿದಿದ್ದುಆತನನ್ನು ವಿಚಾರಣೆಗೊಳಪಡಿಸಿದಾಗ ಆತ ಪರಮೇಶಿ,

ಹನುಮಂತ, ಚನ್ನಗಿರಿ ಪಾಪಣ್ಣ ರವರೊಂದಿಗೆ ಸೇರಿ ಚಿಕ್ಕಜಾಜೂರು ಸಾಸಲು ಹನುಮನಕಟ್ಟೆ ಮತ್ತು ಮಲ್ಲಾಡಿಹಳ್ಳಿ ಗ್ರಾಮಗಳಲ್ಲಿ ಕಳುವು ಮಾಡಿದ್ದಾಗಿ ಒಪ್ಪಿಕೊಂಡಿದ್ದರ ಮೇರೆಗೆ ಆತನನ್ನು ವಶಕ್ಕೆ ಪಡೆದುಕೊಂಡು ಕಳುವು ಮಾಡಿದ ಒಡವೆಗಳನ್ನು ವಶಪಡಿಸಿಕೊಂಡಿದ್ದು ಅವುಗಳಲ್ಲಿ ನಮ್ಮ ಮನೆಯಲ್ಲಿ ಕಳುವುವಾಗಿದ್ದ ಒಡವೆಗಳನ್ನು ಅವುಗಳಲ್ಲಿ ಕೇವಲ ಎರಡು ಬಂಗಾರದ ಉಂಗುಗಳು ಮತ್ತು ಒಂದು ಓಲೆ ಮುತ್ತ ಜುಮಕಿ ಇತ್ತು ಎಂದು ಹೇಳಿರುತ್ತಾರೆ.

26. ಈ ಮೇಲ್ಕಂಡ 1ನೇ ಆರೋಪಿ ಇತರೆ ಆರೋಪಿತರೊಂದಿಗೆ ಸೇರಿ ಮಲ್ಲಾಡಿ ಗ್ರಾಮ ಇತರೆ ಕಡೆ ಕಳ್ಳತನ ಮಾಡಿರುವುದಾಗಿ ಸ್ವ ಇಚ್ಛಾ ಹೇಳಿಕೆ ನೀಡಿರುತ್ತಾರೆಂದು ಅಭಿಯೋಜನೆಯ ವಾದ ವಾಗಿದ್ದು ಯಾವುದೇ ಆರೋಪಿ ಪೋಲಿಸರ ವಶದಲ್ಲಿ ಸ್ವಯಂ ಹೇಳಿಕೆ ನಂಬರ್ಲಹ ಮತ್ತು ಸ್ವೀಕಾರ್ಹ ಸಾಕ್ಷ್ಯವಾಗಿರುವುದಿಲ್ಲ. ಸದರಿ ಆರೋಪಿಯ ಸ್ವ ಇಚ್ಛಾ ಹೇಳಿಕೆಯಿಂದ ಅಮಾನತ್ತುಪಡಿಸಿಕೊಂಡಿದ್ದ ಸಂದರ್ಭಗಳಲ್ಲಿ ಮಾತ್ರ ಸ್ವೀಕಾರ್ಹವಾದ ಸಾಕ್ಷ್ಯ ಆಗಿ ಕಂಡುಬರುತ್ತದೆ. ಈ ಪ್ರಕರಣದಲ್ಲಿ ಒಂದು ವೇಳೆ ಆರೋಪಿಯ ಸ್ವ ಇಚ್ಛಾ ಹೇಳಿಕೆಯನ್ನು ನೀಡಿ ತನ್ನ ತಪ್ಪನ್ನು ಒಪ್ಪಿಕೊಳ್ಳುತ್ತಾನೆಂದು ಕಂಡು ಬಂದಿದ್ದ ಪಕ್ಷದಲ್ಲಿ ತನಿಖಾಧಿಕಾರಿ 1ನೇ ಆರೋಪಿಯನ್ನು ನ್ಯಾಯಾಲಯದ ಮುಂದೆ ಹಾಜರುಪಡಿಸಿ ಆತನ ತಪ್ಪೊಪ್ಪಿಗೆಯ ಹೇಳಿಕೆಯನ್ನು ದಾಖಲಿಸಬಹುದಾಗಿತ್ತು ಆದರೆ ಈ ಪ್ರಕರಣದಲ್ಲಿ ಅಂತಹ ಯಾವುದೇ ಪ್ರಯತ್ನ ಮಾಡಿರುವುದಿಲ್ಲ. ಆದ್ದರಿಂದ ಎರಡು ಬಂಗಾರದ ಉಂಗುರುಗಳು ಒಂದು ಜೊತೆ ಓಲೆ ಜುಮಕಿ 1ನೇ ಅರೋಪಿಯಿಂದ ವಶಪಡಿಸಿದ್ದಾಗ್ಯೂ ಸಹ 1ನೇ ಅರೋಪಿ ಮರಣಹೊಂದಿದ್ದು 2 ರಿಂದ 4ನೇ ಅರೋಪಿತರು ಈ ಪ್ರಕರಣದಲ್ಲಿ ಬಾಗಿಯಾಗಿ ಕಳ್ಳತನ

ಮಾಡಿರುತ್ತಾರೆಂದು ಸ್ಪಷ್ಟವಾದ ಸಾಕ್ಷ್ಯದಾರಗಳು ಇರುವುದಿಲ್ಲ. ಕೇವಲ ಸ್ವೀಕೃತರ್ಹವಲ್ಲದ ಸ್ವ ಇಚ್ಚಾ ಹೇಳಿಕೆಯಿಂದ 2 ರಿಂದ 4ನೇ ಆರೋಪಿತರು 1ನೇ ಆರೋಪಿಯೊಂದಿಗೆ ಸೇರಿಕೊಂಡು ಪ್ರಾ ಸಾ-2 ರವರ ಮನೆಯಲ್ಲಿ ಅಪರಾಧ ಮಾಡಿರುತ್ತಾರೆಂದು ನಂಬರ್ಲಹವಾಗಿರುವುದಿಲ್ಲ. ಅನುಮಾನಸ್ಪದವಾಗಿದ್ದು, ಅನುಮಾನದ ಅನುಕೂಲತೆಯನ್ನು ಆರೋಪಿತರ ಪರವಾಗಿ ಪರಿಗಣಿಸುವುದು ಸೂಕ್ತವಾಗಿರುತ್ತದೆ.

27. ಪ್ರಾ ಸಾ-2 ರವರ ಪ್ರಕಾರ ಪಾಟೀ ಸವಾಲಿನಲ್ಲಿ ಒಪ್ಪಿಕೊಂಡಿರುವಂತೆ ತಮ್ಮ ಮನೆಯ ಸುತ್ತ-ಮುತ್ತ ವಾಸದ ಮನೆಗಳಿರುತ್ತವೆ ಎಂದರೆ ಸರಿ ಸಾಮಾನ್ಯವಾಗಿ ಮನೆಗಳಲ್ಲಿ ಜನರು ಇರುತ್ತಾರೆಂದರೆ ಸರಿ ಮನೆ ಮುಂದಿನ ರಸ್ತೆ ಚನ್ನಪ್ಪನಹಟ್ಟಿಗೆ ಹೋಗುತ್ತದೆ ಎಂದರೆ ಸರಿ ಜನರು ಯಾವಾಗಲೂ ಓಡಾಡುವ ರಸ್ತೆ ಎಂದು ಒಪ್ಪಿಕೊಂಡಿದ್ದು ಅಕ್ಕ ಪಕ್ಕದ ಮನೆಯ ಯಾವುದೇ ವಾಸಿಗಳು ಕಳ್ಳತನವಾದ ಬಗ್ಗೆ ಹಗಲು ಹೊತ್ತಿನಲ್ಲಿ ಗಮನಿಸಿರುವುದಿಲ್ಲ ದೂರುದಾರರು ಅದೇ ದಿನ ದೂರು ದಾಖಲಿಸಿರುವುದಿಲ್ಲ 2 ರಿಂದ 4ನೇ ಆರೋಪಿತರು ಸ್ಥಳಕ್ಕೆ ಬಂದಿದ್ದ ಬಗ್ಗೆ ಯಾರು ಸಹ ನೋಡಿರುವುದಿಲ್ಲ ಆದ್ದರಿಂದ ಆರೋಪಿತರು ಈ ಪ್ರಕರಣದಲ್ಲಿ ಬಾಗಿಯಾಗಿರುವ ಬಗ್ಗೆ ಯಾವುದೇ ಸಾಕ್ಷ್ಯಧಾರಗಳು ಇರುವುದಿಲ್ಲ.

28. ಪ್ರಾ ಸಾ-2 ರವರು ತನ್ನ ಪಾಟೀ ಸವಾಲಿನಲ್ಲಿ ಓಲೆ ಜುಮಕಿ ಉಂಗುರಗಳು ನಮಗೆ ಸಂಬಂದಿಸಿದ್ದವು ಎಂಬ ಬಗ್ಗೆ ಯಾವುದೇ ದಾಖಲೆ ಇಲ್ಲ ಎಂದು ಒಪ್ಪಿಕೊಂಡಿದ್ದು ಸದರಿ ಮಧ್ಯಂತರ ವಶಕ್ಕೆ ನೀಡಿದ ಬಂಗಾರದ ಒಡವೆಗಳು ಪ್ರಾ ಸಾ-2 ರವರಿಗೆ ಸೇರಿತ್ತು ಎಂಬ ಬಗ್ಗೆ ಯಾವುದೇ ರುಜುವಾತು ಇರುವುದಿಲ್ಲ ತಾನು ಠಾಣೆಗೆ ಹೋಗಿದ್ದಾಗ 1ನೇ

ಆರೋಪಿಯನ್ನು ತೋರಿಸಿದ್ದು, 1ನೇ ಆರೋಪಿಯಿಂದ ಎರಡು ಬಂಗಾರದ ಉಂಗುರಗಳು ಒಂದು ಜೊತೆ ಓಲೆ ವಶಪಡಿಸಿಕೊಂಡಿರುತ್ತೇವೆಂದು ಪೋಲಿಸರು ಹೇಳಿದರು ಎಂದು ತಿಳಿಸಿದ್ದು 2 ರಿಂದ 4ನೇ ಆರೋಪಿತರನ್ನು ಪ್ರಾಸಾ-2 ರವರು ಈ ಹಿಂದೆ ನೋಡಿರುವುದಿಲ್ಲ ಎಂದು ಸ್ಪಷ್ಟವಾಗಿ ಕಂಡುಬಂದಿರುತ್ತದೆ. 1ನೇ ಆರೋಪಿಯ ಸ್ವ ಇಚ್ಛಾ ಹೇಳಿಕೆಯಿಂದ 2ನೇ ರಿಂದ 4 ನೇ ಆರೋಪಿತರನ್ನು ಸೇರಿಸಿದಾಗ್ಯೂ ಸಹಾ 2 ರಿಂದ 4ನೇ ಆರೋಪಿತರಿಂದ ಯಾವುದೇ ಬಂಗಾರದ ಒಡವೆಗಳು ಅಮಾನತ್ತುಪಡಿಸಿಕೊಂಡಿರುವುದಿಲ್ಲ, ಈ ಮೇಲ್ಕಂಡ ಕಾರಣಗಳಿಂದಾಗಿ 2 ರಿಂದ 4ನೇ ಆರೋಪಿತರು ಈ ಪ್ರಕರಣದಲ್ಲಿ ಬಾಗಿಯಾಗಿರುವ ಬಗ್ಗೆ ಅಭಿಯೋಜನೆಯು ದೂರುದಾರರ ಮೂಲಕ ರುಜುವಾತುಪಡಿಸುವಲ್ಲಿ ವಿಫಲವಾಗಿರುತ್ತದೆ.

29. ಪ್ರಾಸಾ-3 ಮತ್ತು ಪ್ರಾಸಾ-4 ರವರಗಳು ದೂರುದಾರರ ಗ್ರಾಮದವರಾಗಿದ್ದು, ಕಳ್ಳತನವಾದ ಸಂದರ್ಬದಲ್ಲಿ ಸ್ಥಳಕ್ಕೆ ಬಂದಿದ್ದ ಬಗ್ಗೆ ಹಾಗೂ ಪ್ರಾಸಾ-2 ರವರಿಂದ ವಸ್ತು ಸಂಗತಿ ತಿಳಿದಕೊಂಡ ಬಗ್ಗೆ ಸಾಕ್ಷ್ಯವನ್ನು ನುಡಿದಿರುತ್ತಾರೆ. ಇವರುಗಳು ಹೇಳಿಕೆಯ ಸಾಕ್ಷಿದಾರರಾಗಿರುತ್ತಾರೆ, ಪ್ರಾಸಾ-3 ತಮ್ಮ ಮುಖ್ಯ ವಿಚಾರಣೆಯಲ್ಲಿ ನಾನು ಅದೇ ಊರಿನವನಾಗಿದ್ದು ಚಾಸಾ-1 ರವರ ಮನೆಯ ಹತ್ತಿರ ಹೋದಾಗ ನನಗೆ ವಿಚಾರ ತಿಳಿಸಿದ್ದು, ಕೊರಳ ಚೈನು ಎರಡು ಉಂಗುರ ಒಂದು ಜೊತೆ ಓಲೆ ಮತ್ತು ರೂ 9000/- ಕಳ್ಳತನವಾಗಿದ್ದು, ಪ್ರಾಸಾ-1 ರವರು ದೂರು ದಾಖಲಿಸಿರುತ್ತಾರೆಂದು ಸಾಕ್ಷ್ಯವನ್ನು ನುಡಿದಿದ್ದು, ತಮ್ಮ ಪಾಟೀ ಸವಾಲಿನಲ್ಲಿ ಕಳ್ಳತನವಾದ ಬಂಗಾರದ ಒಡವೆಗಳು ಎಷ್ಟು ತೂಕ ಇದ್ದವು ಅವುಗಳ ಬೆಲೆ ಗೊತ್ತಿಲ್ಲ ನಾನು ಯಾರಿಗೆ ಹೇಳಿಕೆ ನೀಡಿರುತ್ತೇನೆ ಎಂದು ಗೊತ್ತಿಲ್ಲ, ಸದರಿ ಕಳ್ಳತನ ಯಾರು ಮಾಡಿರುತ್ತಾರೆಂದು ನನಗೆ ಗೊತ್ತಿಲ್ಲ ಎಂದು ಸಾಕ್ಷ್ಯವನ್ನು ನುಡಿದಿದ್ದು, ಈ ಸಾಕ್ಷ್ಯ

ವಿಚಾರಣೆಯಲ್ಲಿ ಅಭಿಯೋಜನೆಯ ಪ್ರಕರಣಕ್ಕೆ ಪೂರಕವಾಗಿರುವುದಿಲ್ಲ.

30. ಪ್ರಾಸಾ-4 ರವರು ತಮ್ಮ ಮುಖ್ಯ ವಿಚಾರಣೆಯಲ್ಲಿ ಚಾಸಾ-1 ರವರ ಮನೆಯಲ್ಲಿ ಕಳ್ಳತನವಾಗಿರುವ ವಿಚಾರವನ್ನು ನನಗೆ ತಿಳಿಸಿರುತ್ತಾರೆ ಒಂದು ಕೊರಳ ಚೈನು, ಒಂದು ಉಂಗುರ ಜುಮಕಿ ಮತ್ತು ಓಲೆ ಹಾಗೂ ರೂ.9,000/- ನಗದು ಹಣ ಕಳ್ಳತನವಾಗಿರುವ ಬಗ್ಗೆ ತಿಳಿಸಿದ್ದು, ಪೋಲಿಸರಿಗೆ ಹೇಳಿಕೆಯನ್ನು ನೀಡಿರುತ್ತೇನೆ ಕಳ್ಳತನ ಯಾರು ಮಾಡಿರುತ್ತಾರೆಂದು ನಮಗೆ ತಿಳಿದಿರುವುದಿಲ್ಲ ಎಂದು ಪ್ರತಿಕೂಲ ಸಾಕ್ಷ್ಯವನ್ನು ನುಡಿದಿರುತ್ತಾರೆ, ತಮ್ಮ ಪಾಟೀ ಸವಾಲಿನಲ್ಲಿ ಯಾವ ದಿನಾಂಕ ಮತ್ತು ತಿಂಗಳು ಇಸವಿಯನ್ನು ಚಾಸಾ-1 ರವರ ಮನೆಯಲ್ಲಿ ಕಳ್ಳತನವಾಗಿದ್ದು ಗೊತ್ತಿಲ್ಲ ಕಳ್ಳತನವಾದ ಒಡವೆಗಳನ್ನು ನಾನು ನೋಡಿರುವುದಿಲ್ಲ ಚಾಸಾ-1 ರವರು ತಿಳಿಸಿದ್ದರಿಂದ ಕಳ್ಳತನವಾದ ವಸ್ತುಗಳ ಬಗೆ ಗೊತ್ತಾಗಿರುತ್ತದೆ ಎಂದು ಸಾಕ್ಷ್ಯವನ್ನು ನುಡಿದಿದ್ದು, ಈ ಸಾಕ್ಷಿಯ ಹೇಳಿಕೆಯು ಆರೋಪಿತರ ಮೇಲೆ ಆರೋಪ ರುಜುವಾತುಗಾಗಿ ಅನುಕೂಲಕರವಾಗಿರುವುದಿಲ್ಲ.

31. ಪ್ರಾಸಾ-5 ರವರು ನಿಪಿ-5 ಅಮಾನತ್ತು ಪಂಚನಾಮೆ ಸಾಕ್ಷಿದಾರರಾಗಿದ್ದು, ತಮ್ಮ ಮುಖ್ಯ ವಿಚಾರಣೆಯಲ್ಲಿ 1ನೇ ಆರೋಪಿ ನನಗೆ ಗೊತ್ತಿಲ್ಲ, ಚಾಸಾ-1 ಮತ್ತು 2 ಗೊತ್ತಿಲ್ಲ ಪ್ರಕರಣದ ವಿಚಾರಗಳಾವು ನನಗೆ ಗೊತ್ತಿಲ್ಲ, ಸುಮಾರು 12 ವರ್ಷಗಳ ಹಿಂದೆ ಪೋಲಿಸರು ಹೇಳಿದ ಮೇರೆಗೆ ನಿಪಿ-5 ಕ್ಕೆ ಪೋಲಿಸ್ ಠಾಣೆಯಲ್ಲಿ ಸಹಿ ಮಾಡಿರುತ್ತೇನೆ ನಿಪಿ-5 ರಲ್ಲಿ ಬರೆದಿರುವ ವಿಚಾರಗಳು ನನಗೆ ಗೊತ್ತಿಲ್ಲ ಅದನ್ನು ಪೋಲಿಸರು ಓದಿ ಹೇಳಿಲ್ಲ ನನ್ನ ಸಮಕ್ಷಮ ಯಾವುದೇ ಪಂಚನಾಮೆ ಮಾಡಿರುವುದಿಲ್ಲ ಯಾವುದೇ ವಸ್ತುಗಳನ್ನು

ಅಮಾನತ್ತುಪಡಿಸಿಕೊಂಡಿರುವುದಿಲ್ಲಎಂದು ಸಾಕ್ಷ್ಯವನ್ನು ನುಡಿದಿದ್ದು, ಸಂಪೂರ್ಣ ಪ್ರತಿಕೂಲ ಸಾಕ್ಷಿದಾರರಾಗಿರುತ್ತಾರೆ, ಈ ಸಾಕ್ಷಿಯ ಮೂಲಕ ನಿಪಿ-5 ಅಮಾನತ್ತು ಪಂಚನಾಮೆ ರುಜುವಾತಾಗಿರುವುದಿಲ್ಲ.

32. ಪ್ರಾಸಾ-6 ರವರು ಈ ಪ್ರಕರಣದಲ್ಲಿ 1ನೇ ಆರೋಪಿಯಿಂದ ಅಮಾನತ್ತುಪಡಿಸಿಕೊಂಡ ಬಂಗಾರದ ಒಡವೆಗಳನ್ನು ಸ್ಥಳದಲ್ಲಿ ತೂಕ ಮಾಡಿ ಬಂಗಾರದ ನೈಜತೆಯನ್ನು ಪರಿಶೀಲಿಸಿ ಧೃಡಪಡಿಸಿಕೊಂಡಿರುವ ಬಗ್ಗೆ ಸಾಕ್ಷಿದಾರರಾಗಿದ್ದು, ತಮ್ಮ ಮುಖ್ಯ ವಿಚಾರಣೆಯಲ್ಲಿ 1ನೇ ಆರೋಪಿ ಗೊತ್ತಿಲ್ಲ, ಪ್ರಕರಣದ ವಿಚಾರಗಳಾವುವು ನನಗೆ ಗೊತ್ತಿಲ್ಲ ಪೋಲಿಸರು ನನ್ನನ್ನು ವಿಚಾರಿಸಿಲ್ಲ ಎಂದು ಸಂಪೂರ್ಣ ಪ್ರತಿಕೂಲ ಸಾಕ್ಷಿಯಾಗಿದ್ದು, ಅಭಿಯೋಜಕರ ಪಾಟೀ ಸವಾಲಿನಲ್ಲಿ ಪ್ರಕರಣಕ್ಕೆ ಪೂರಕವಾಗಿ ನುಡಿದಿರುವುದಿಲ್ಲ ಆದ್ದರಿಂದ ಈ ಸಾಕ್ಷಿಯು ಬಂಗಾರದ ಒಡವೆಗಳನ್ನು ಪರೀಕ್ಷಿಸಿ ತೂಕ ಧೃಡಪಡಿಸಿರುವ ಬಗ್ಗೆ ಅಭಿಯೋಜನೆಯವರು ರುಜುವಾತುಪಡಿಸಿರುವುದಿಲ್ಲ.

33. ಪ್ರಾಸಾ-7 ಮತ್ತು 8 ರವರು ಈ ಪ್ರಕರಣದಲ್ಲಿ ಆರೋಪಿ ಪತ್ತೆಗಾಗಿ ನೇಮಿಸಿದ ಪೋಲಿಸ್ ಪೇದೆಯಾಗಳಾಗಿದ್ದು, ತಮ್ಮ ವಿಚಾರಣೆ ವೇಳೆ ಸಾಸಲು ಹಳ್ಳ ಸರ್ಕಲ್ ಬಳಿ ಗಸ್ತು ಮಾಡುತ್ತಿರುವಾಗ ಸಂಜೆ 6-00 ಗಂಟೆ ಸಮಯದಲ್ಲಿ ಒಬ್ಬ ವ್ಯಕ್ತಿ ಓಡಿ ಹೋಗಲ ಪ್ರಯತ್ನಿಸಿದಾಗ ಆತನನ್ನು ಹಿಡಿದು ಕೇಳಲಾಗಿ ಸಮಂಜಸವಾದ ಉತ್ತರವನ್ನು ನೀಡದ ಕಾರಣ ಆತನ ಹೆಸರು ಮತ್ತು ವಿಳಾಸ ವಿಚಾರಿಸಲಾಗಿ 1 ನೇ ಆರೋಪಿ ನವೀನ್ ಯಾನೆ ಸ್ವಾಮಿ ತಂದೆ ಗಂಗಣ್ಣ ಎಂದು ವಿಳಾಸ ತಿಳಿಸಿದ್ದು ಚಾಸಾ-7 ರವರ ಮುಂದೆ ಹಾಜರುಪಡಿಸಿದ್ದು ಮಲ್ಲಾಡಿಹಳ್ಳಿ ಗ್ರಾಮದಲ್ಲಿ ಮತ್ತು ಇತರೆ ಕಡೆ ಕಳ್ಳತನ ಮಾಡಿರುವ ಬಗ್ಗೆ

ಒಪ್ಪಿಕೊಂಡಿರುತ್ತಾರೆಂದು ಸಾಕ್ಷ್ಯವನ್ನು ನುಡಿದಿರುತ್ತಾರೆ. ಮುಂದುವರೆದು ಸಿಪಿಐ ಸಾಹೇಬರು ವಿಚಾರಿಸಿ ಚೆಕ್ ಮಾಡಲಾಗಿ ಪ್ಯಾಂಟ್ ಜೇಬಿನಲ್ಲಿ ಒಂದು ಬಂಗಾರದ ಕೊರಳ ಚೈನ್ ದೊರೆತಿದ್ದು ಅದರ ಬಗ್ಗೆ ವಿಚಾರ ಮಾಡಲಾಗಿ ನಮ್ಮ ಠಾಣೆಯ ಮೊ. ಸಂಖ್ಯೆ 128/2013 ಪ್ರಕರಣಕ್ಕೆ ಸಂಬಂಧಿಸಿರುತ್ತದೆ ಕಂಡು ಬಂದಿರುತ್ತದೆ ಎಂದು ಸಾಕ್ಷ್ಯವನ್ನು ನುಡಿದಿರುತ್ತಾರೆ. ತಮ್ಮ ಪಾಟೀ ಸವಾಲಿನಲ್ಲಿ ಆರೋಪಿತರು ಮತ್ತು ಮಾಲುಗಳನ್ನು ಪತ್ತೆ ಮಾಡಿಕೊಂಡು ಬರಲು ಮೌಖಿಕವಾಗಿ ಸೂಚಿಸಿದ್ದು ಯಾವುದೇ ಲಿಖಿತ ಆದೇಶವನ್ನು ನೀಡಿರುವುದಿಲ್ಲ ಎಂದು ಒಪ್ಪಿಕೊಂಡಿರುತ್ತಾರೆ.

34. ಅದೇ ರೀತಿ ಪ್ರಾಸಾ-8 ರವರು ಸಹಾ ಈ ಪ್ರಕರಣದಲ್ಲಿ ಆರೋಪಿತರ ಪತ್ತೆಗೆ ಕಳುಹಿಸಿದಾಗ 1ನೇ ಆರೋಪಿಯನ್ನು ಹಿಡಿದು ಹಾಜರುಪಡಿಸಿದ ಬಗ್ಗೆ ಸಾಕ್ಷ್ಯ ನುಡಿದಿದ್ದು, ಚಾಸಾ-16 ರವರ ಆದೇಶದ ಮೇರೆಗೆ ಚಾಸಾ-9 ಮತ್ತು 10 ರವರ ಸಮಕ್ಷಮ ನಿಪಿ-4 ರಂತೆ ಎರಡು ಬಂಗಾರದ ಉಂಗುರಗಳು ಒಂದು ಜೊತೆ ಜುಮಕಿ ಮಧ್ಯಂತರ ವಶಕ್ಕೆ ನೀಡಿದ ಬಗ್ಗೆ ಸಾಕ್ಷ್ಯವನ್ನು ನುಡಿದಿದ್ದು ತಮ್ಮ ಪಾಟೀ ಸವಾಲಿನಲ್ಲಿ ಪ್ರಕರಣದ ಆರೋಪಿ ಮತ್ತು ಮಾಲು ಪತ್ತೆಗಾಗಿ ಯಾವುದೇ ಲಿಖಿತ ಆದೇಶವಿರುಲಿಲ್ಲ ಮೌಖಿಕ ಆದೇಶ ಇತ್ತು ಎಂದು ಒಪ್ಪಿಕೊಂಡಿರುತ್ತಾರೆ, ಪಂಚನಾಮೆ ಕಾಲಕ್ಕೆ ಯಾವುದೇ ಫೋಟೋ ತೆಗೆದಿಲ್ಲ ಎಂದು ಒಪ್ಪಿಕೊಂಡಿರುತ್ತಾರೆ, ಈ ಪ್ರಕರಣದಲ್ಲಿ ನಿಪಿ-4 ರ ಮಾಲು ವಿತರಣಾ ಪಂಚನಾಮೆ ಸಾಕ್ಷಿದಾರರಾದ ಚಾಸಾ-9 ಮತ್ತು 10 ರವರುಗಳು ಈ ಪ್ರಕರಣದಲ್ಲಿ ವಿಚಾರಣೆಗೊಳಪಟ್ಟಿರುವುದಿಲ್ಲ ಆದ್ದರಿಂದ ಮಾಲು ವಿತರಣಾ ಪಂಚನಾಮೆ ನಿಪಿ-4 ರುಜುವಾತಾಗಿರುವುದಿಲ್ಲ.

35. ಪ್ರಾಸಾ-9 ರವರು ಈ ಪ್ರಕರಣದಲ್ಲಿ ಪ್ರಥಮ ವರ್ತಮಾನ

ವರದಿ ದಾಖಲಿಸಿಕೊಂಡು ತನಿಖೆಗಾಗಿ ಚಾಸಾ-16 ರವರಿಗೆ ಪ್ರಕರಣದ ಕಡತವನ್ನು ಹಸ್ತಾಂತರಿಸಿರುವುದಾಗಿ ಸಾಕ್ಷ್ಯವನ್ನು ನುಡಿದಿರುತ್ತಾರೆ, ಪ್ರಾಸಾ-10 ರವರು ಅಂತಿಮ ತನಿಖಾಧಿಕಾರಿಯಾಗಿದ್ದು ತಮ್ಮ ಮುಖ್ಯ ವಿಚಾರಣೆಯಲ್ಲಿ 1ನೇ ಆರೋಪಿ ಚಾಸಾ-11 ಮತ್ತು 13 ರವರು ಹಾಜರುಪಡಿಸಿದ್ದು ಸ್ವಇಚ್ಚಾ ಹೇಳಿಕೆಯನ್ನು ದಾಖಲು ಮಾಡಿರುತ್ತೇನೆ. 1ನೇ ಆರೋಪಿ ಮಲ್ಲಾಡಿಹಳ್ಳಿ ಮತ್ತು ಇತರೆ ಕಡೆ ಕಳುವು ಮಾಡಿರುವುದಾಗಿ ಹೇಳಿಕೆ ನೀಡಿರುತ್ತಾನೆ ಆತನ ಪಾಲಿನ ಕಳುವು ಮಾಡಿದ ಒಡವೆಗಳನ್ನು ಮನೆಯಲ್ಲಿಟ್ಟಿರುವುದಾಗಿ ಹೇಳಿದ್ದು ನನ್ನ ಜೊತೆ ಬಂದರೆ ತೋರಿಸುತ್ತೇನೆಂದು ಸಾಕ್ಷ್ಯವನ್ನು ನುಡಿದಿದ್ದು ದಿನಾಂಕ 04/07/2013 ರಂದು ಆರೋಪಿತನ ಮನೆಗೆ ಕರೆದುಕೊಂಡು ಹೋಗಿದ್ದು ಚಾಸಾ-6 ಮತ್ತು 7 ರವರ ಸಮಕ್ಷಮ ಬಂಗಾರದ ಒಡವೆಗಳನ್ನು ಚಾಸಾ-8 ರವರ ಸಮಕ್ಷಮ 40 ಗ್ರಾಂ ಮಾಂಗಲ್ಯ ಸರ 11 ಗ್ರಾಂ ಗೋದಿ ಗುರುತಿನ ಬಂಗಾರದ ಸರ 03 ಗ್ರಾಂ ಒಂದು ಜೊತೆ ಬಂಗಾರದ ಓಲೆಗಳು 13 ಗ್ರಾಂ ಬಂಗಾರದ ಎರಡು ಉಂಗುರಗಳನ್ನು ಮತ್ತು ಒಂದು ಜೊತೆ ಜುಮಕಿಯನ್ನು ಅಮಾನತ್ತುಪಡಿಸಿಕೊಂಡಿರುತ್ತೇನೆ ಎಂದು ಸಾಕ್ಷ್ಯವನ್ನು ನುಡಿದಿರುತ್ತಾರೆ, ಚಾಸಾ-6 ಮತ್ತು 7 ರವರು ಪ್ರಾಸಾ-5 ಮತ್ತು 11 ರಂತೆ ವಿಚಾರಣೆಗೂಳಪಟ್ಟದ್ದು ಅಭಿಯೋಜನೆಯ ಪ್ರಕರಣಕ್ಕೆ ಸಂಪೂರ್ಣವಾಗಿ ಪ್ರತಿಕೂಲ ಸಾಕ್ಷಿದಾರರಾಗಿದ್ದು, ಅಮಾನತ್ತು ಪಂಚನಾಮೆ ನಿಪಿ-5 ರುಜುವಾತಾಗಿರುವುದಿಲ್ಲ ಪೋಲಿಸರ ಹೇಳಿಕೆಯ ಮೇರೆಗೆ ಠಾಣೆಯಲ್ಲಿ ಸಹಿ ಮಾಡಿರುತ್ತೇನೆಂದು ಪ್ರಾಸಾ-5 ಮತ್ತು 11 ರವರು ನುಡಿದಿದ್ದು ಆರೋಪಿಯ ಮೂಲಕ ಆರೋಪಿಯ ಮನೆಯಲ್ಲಿ ಬಂಗಾರದ ಒಡವೆಗಳು ಅಮಾನತ್ತುಪಡಿಸಿಕೊಳ್ಳಲಾಗಿರುತ್ತದೆ, ರುಜುವಾತುಪಡಿಸಿರುವುದಿ, ಒಟ್ಟಾರೆಯಾಗಿ ಅಭಿಯೋಜನೆಯು ನಿಪಿ-4 ಮಾಲು ವಿತರಣಾ ಪಂಚನಾಮೆ

ನಿಪಿ-5 ಮಾಲು ಅಮಾನತ್ತು ಪಂಚನಾಮೆ ರುಜುವಾತುಪಡಿಸುವಲ್ಲಿ ವಿಫಲವಾಗಿದ್ದು ಕೇವಲ 1ನೇ ಆರೋಪಿಯ ಸ್ವ ಇಚ್ಛಾ ಹೇಳಿಕೆಯ ಮೇರೆಗೆ 2 ರಿಂದ 4ನೇ ಆರೋಪಿತರನ್ನು ಈ ಪ್ರಕರಣದಲ್ಲಿ ಆರೋಪಿಗಳನ್ನಾಗಿ ಸೇರ್ಪಡೆಗೊಳಿಸಿದ್ದು 2 ರಿಂದ 4ನೇ ಆರೋಪಿತರ ಸಮಕ್ಷಮ ಅಥವಾ 2 ರಿಂದ 4ನೇ ಆರೋಪಿತರಿಂದ ಮಾಲು ಪಟ್ಟಿಯಲ್ಲಿ ನಮೂದಿಸಿರುವ ಬಂಗಾರದ ಒಡವೆಗಳು ವಶಪಡಿಸಿಕೊಂಡಿರುವುದಿಲ್ಲ ಹಾಗೂ 2 ರಿಂದ 4ನೇ ಆರೋಪಿತರನ್ನು ದೂರುದಾರರ ಮನೆಯಲ್ಲಿ ಕಳ್ಳತನ ಮಾಡುವ ಅಥವಾ ದರೋಡೆ ಮಾಡುವ ಸಂದರ್ಭದಲ್ಲಿ ಯಾರು ಘಟನಾ ಸ್ಥಳದಲ್ಲಿ ಆರೋಪಿತರು ಬಂದಿದ್ದರು ಎಂಬ ಬಗ್ಗೆ ಯಾವುದೇ ಸಾಕ್ಷ್ಯವನ್ನು ನುಡಿದಿರುವುದಿಲ್ಲ ಆದ್ದರಿಂದ ಆರೋಪಿತರು 2 ರಿಂದ 4ನೇ ಆರೋಪಿತರು ಈ ಪ್ರಕರಣದಲ್ಲಿ ಬಾಗಿಯಾಗಿ ಅಪರಾಧವೆಸಗಿರುತ್ತಾರೆಂದು ಮೇಲ್ಕಂಡ ಎಲ್ಲಾ ಅನುಮಾನಸ್ಪದ ಸಂದರ್ಭಗಳನ್ನು ಹೊರತುಪಡಿಸಿ ಆರೋಪಿತರ ಮೇಲೆ ಆರೋಪಿಸಿರುವಂತಹ ಅಪರಾಧ ಎಸಗಿರುತ್ತಾರೆಂದು ರುಜುವಾತುಪಡಿಸುವಲ್ಲಿ ಅಭಿಯೋಜನೆಯವರು ಸಂಪೂರ್ಣವಾಗಿ ವಿಫಲವಾಗಿರುತ್ತದೆ ಎಂದು ಕಂಡುಬಂದಿರುತ್ತದೆ. ಆದ್ದರಿಂದ 2 ರಿಂದ 4ನೇ ಆರೋಪಿತರ ವಿರುದ್ದ ಆರೋಪ ರುಜುವಾತುಪಡಿಸಲು ಸುಸಂಬದ್ದ, ಸ್ಪಷ್ಟ ಮತ್ತು ಪೂರಕ ದಾಖಾಲಾತಿಗಳನ್ನು ಹಾಜರುಪಡಿಸಿ ಮೌಖಿಕ ಸಾಕ್ಷಿಗಳ ಮೂಲಕ ಆರೋಪ ಪಟ್ಟಿಯಲ್ಲಿ ಆಪಾದಿಸಿರುವಂತೆ ಆರೋಪಗಳನ್ನು ಮೇಲ್ಕಂಡ ಎಲ್ಲಾ ಸಂಶಯಾಸ್ಪದ ಸಂದರ್ಭಗಳನ್ನು ಹೊರತುಪಡಿಸಿ 2 ರಿಂದ 4ನೇ ಆರೋಪಿತರ ವಿರುದ್ಧ ಸಂಶಯತೀತವಾಗಿ ಆರೋಪಗಳನ್ನು ರುಜುವಾತುಪಡಿಸುವಲ್ಲಿ ಸಂಪೂರ್ಣವಾಗಿ ವಿಫಲರಾಗಿರುತ್ತಾರೆ. ಆದುದರಿಂದ ಅಂಶ **1 ಮತ್ತು 2** ನ್ನು ನಕಾರಾತ್ಮಕವಾಗಿ ಈ

ನ್ಯಾಯಾಲಯವು ಉತ್ತರಿಸಿರುತ್ತದೆ.

**36. ಅಂಶ 3 ಃ-** ಈ ಮೇಲೆ ಚರ್ಚಿಸಲ್ಪಟ್ಟ ಕಾರಣಗಳಿಗಾಗಿ ಈ ಕೆಳಕಂಡಂತೆ

ನ್ಯಾಯಾಲಯವು ಆದೇಶಿಸಿರುತ್ತದೆ.

## ಃಃ ಆದೇಶ ಃಃ

ದಂ.ಪ್ರ.ಸಂ.ಕಲಂ.248**(**1**)** ರಡಿಯಲ್ಲಿ ಪ್ರದತ್ತವಾದ ಅಧಿಕಾರವನ್ನು ಉಪಯೋಗಿಸಿ ಭಾ.ದಂ.ಸಂ.ಕಲಂ. 454**,** 380 ರ ಅಡಿಯಲ್ಲಿ ಮಾಡಲಾದ ಆರೋಪಗಳಿಗೆ 2 ರಿಂದ 4ನೇ ಆರೋಪಿತರನ್ನು ನಿರ್ದೋಷಿಗಳು ಎಂದು ತೀರ್ಮಾನಿಸಿ ಖುಲಾಸೆಗೊಳಿಸಲಾಗಿದೆ.

2 ರಿಂದ 4ನೇ ಆರೋಪಿತರು ಮತ್ತು ಜಾಮೀನುದಾರರು ಬರೆದುಕೊಟ್ಟ ಜಾಮೀನು ಮುಚ್ಚಳಿಕೆಗಳನ್ನು ರದ್ದುಗೊಳಿಸಲಾಗಿರುತ್ತದೆ.

2 ರಿಂದ 4ನೇ ಆರೋಪಿತರು ಮತ್ತು ಜಾಮೀನುದಾರರು ಕಲಂ.437 (ಎ) ರಡಿಯಲ್ಲಿನ ಷರತ್ತುಗಳನ್ನು ಪೂರೈಸುವ ಸಲುವಾಗಿ ಬರೆದುಕೊಟ್ಟ ಜಾಮೀನು ಮುಚ್ಚಳಿಕೆಗಳನ್ನು 6 ತಿಂಗಳ ಕಾಲ ಚಾಲ್ತಿಯಡಲಾಗಿರುತ್ತದೆ.

ಅದೇ ರೀತಿ 2 ರಿಂದ 4ನೇ ಆರೋಪಿತರು ಇಂದಿನಿಂದ ಸ್ವತಂತ್ರರಿರುತ್ತಾರೆ.

( ಶೀಘ್ರಲಿಪಿಗಾರರು ನನ್ನ ಉಕ್ತ ಲೇಖನಕ್ಕೆ ನೇರವಾಗಿ ಗಣಕೀಕರಿಸಿದ್ದು, ಸೂಕ್ತ ತಿದ್ದುಪಡಿಗಳನ್ನು ಮಾಡಿದ ನಂತರ, ತೆರೆದ ನ್ಯಾಯಾಲಯದಲ್ಲಿ ಇಂದು ದಿ: 07 ನೇ ಆಗಸ್ಟ್ 2026 ರಂದು ತೀರ್ಪನ್ನು ಘೋಷಿಸಲಾಯಿತು. )

(ಹನುಮಂತರಾಯಪ್ಪ.ಬಿ.ಆರ್)
ಅಪರ ಸಿವಿಲ್ ನ್ಯಾಯಾಧೀಶರು
ಪ್ರ.ದ.ನ್ಯಾ.ದಂಡಾಧಿಕಾರಿರವರು, ಹೊಳಲ್ಕೆರೆ

## ಃಃ ಅನುಬಂಧ ಃಃ

**ಅಭಿಯೋಜನ ಪಕ್ಷದ ಪರ ವಿಚಾರಣೆ ಮಾಡಿದ ಸಾಕ್ಷಿದಾರರ ಪಟ್ಟಿಃ**

| | | |
|---|---|---|
| ಪ್ರಾಸಾ.1 /ಚಾಸಾ-3 | ಃ | ಎಂ.ಆರ್.ಮಂಜುನಾಥ್ |
| ಪ್ರಾಸಾ.2 /ಚಾಸಾ-1 | ಃ | ಎಂ.ವಿ.ನಾಗರಾಜ್ |
| ಪ್ರಾಸಾ.3/ಚಾಸಾ-5 | ಃ | ರವಿಕುಮಾರ್ |
| ಪ್ರಾಸಾ.4 /ಚಾಸಾ-4 | ಃ | ಎನ್.ವಿ ನಾಗರಾಜ |
| ಪ್ರಾಸಾ.5 /ಚಾಸಾ-6 | ಃ | ಮಂಜುನಾಥ |
| ಪ್ರಾಸಾ.6 /ಚಾಸಾ-8 | ಃ | ಬಸವರಾಜ |
| ಪ್ರಾಸಾ.7 /ಚಾಸಾ-11 | ಃ | ಆರ್.ಬಿ.ಸ್ವಾಮಿ |
| ಪ್ರಾಸಾ.8 /ಚಾಸಾ-13 | ಃ | ಸುರೇಶ್ |
| ಪ್ರಾಸಾ.9/ಚಾಸಾ-15 | ಃ | ಕೆ.ಟಿ.ರಮೇಶ್ |
| ಪ್ರಾಸಾ.10/ಚಾಸಾ-16 | ಃ | ಕೆ.ಬಿ.ಶ್ರೀಧರ |
| ಪ್ರಾಸಾ.11/ಚಾಸಾ-7 | ಃ | ಅಂಜಿನಪ್ಪ |

**ಆರೋಪಿತರ ಪರ ವಿಚಾರಣೆ ಮಾಡಲಾದ ಸಾಕ್ಷಿದಾರರ ಪಟ್ಟಿಃ**

- ಇಲ್ಲಾ -

**ಅಭಿಯೋಜನ ಪಕ್ಷದವರ ಪರ ನಿಶಾನಿಸಲಾದ ದಾಖಲಾತಿಗಳ ಪಟ್ಟಿಃ**

| | | |
|---|---|---|
| ನಿಪಿ.1 | ಃ | ಕೃತ್ಯ ನಡೆದ ಸ್ಥಳದ ಪಂಚನಾಮೆ |
| ನಿಪಿ.2 | ಃ | ದೂರು |
| ನಿಪಿ.3 | ಃ | ಕಚ್ಚಾ ನಕಾಶೆ |
| ನಿಪಿ.4 | ಃ | ಮಾಲು ವಿತರಣಾ ಪಂಚನಾಮೆ |
| ನಿಪಿ.5 | ಃ | ಮಾಲು ಅಮಾನತ್ತು ಪಂಚನಾಮೆ |
| ನಿಪಿ.6 | ಃ | ಪ್ರಾಸಾ-5 ರವರ ಹೇಳಿಕೆ |
| ನಿಪಿ.7 | ಃ | ಪ್ರಾಸಾ-6 ರವರ ಹೇಳಿಕೆ |
| ನಿಪಿ.7(ಎ) | ಃ | ಪ್ರಥಮ ವರ್ತಮಾನ ವರದಿ (ಎರಡು ದಾಖಲೆಗಳು ನಿಪಿ-7 ಎಂದು ಗುರುತಿಸಿರುವ ಕಾರಣ ಪ್ರಥಮ ವ.ವರದಿಯನ್ನು ನಿಪಿ-7(ಎ) ಪರಿಗಣಿಸತಕ್ಕದ್ದು) |
| ನಿಪಿ.8 | ಃ | 1 ನೇ ಆರೋಪಿಯ ಸ್ವ ಇಚ್ಛಾ ಹೇಳಿಕೆ |
| ನಿಪಿ.9 | ಃ | ಪ್ರಾಸಾ-11 ರವರ ಹೇಳಿಕೆ |

**ಅಭಿಯೋಜನ ಪಕ್ಷದವರ ಪರ ನಿಶಾನಿಸಲಾದ ಮುದ್ದೆ ಮಾಲುಗಳ ಪಟ್ಟಿಃ** -ಇಲ್ಲ-

ಅಪರ ಸಿವಿಲ್ ನ್ಯಾಯಾಧೀಶರು
ಪ್ರ.ದ.ನ್ಯಾ.ದಂಡಾಧಿಕಾರಿರವರು, ಹೊಳಲ್ಕೆರೆ

HANUMANTHARAYAPPA B R
Digitally signed by HANUMANTHARAYAPPA B R
Date: 2026.08.10 11:05:29 +0530